# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 149 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 13.12.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 149 • PRGI No:KARKAN/2023/88055 • VIJAYANAGARA • 13.12.2024 • Friday • Page:04 • Rs:2



BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits



HAMPI TIMES No.1 LEADING VIJAYANAGARA District News Paper



ಸುದ್ದಿ, ಜಾಹೀರಾತು,
ಜಾಗೃತಿ ಪ್ರಕಟಣೆಗಳ ಪ್ರಕಟಣೆಗಾಗಿ
ಸಂಪರ್ಕಿಸಿ
ಮೊ: 9448633038
e-mail: hampitimes@gmail.com



**ಹಂಪಿ ಟೈಮ್ಸ್**
**ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ**

**ಈ ದಿನದ (13-12-2024) ಚಿತ್ರಸ್ಪರ್ಧೆ**

ನೀರಿನ ವಿದ್ಯುತ್ ವಿಭಜನೆಯಲ್ಲಿ ಉಪಯೋಗಿಸುವ ಉಪಕರಣದ ಅಂದವಾದ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ ?

ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಹಿಸಲು ಮನವಿ.

10ನೇ ತರಗತಿ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.

ವಾಟ್ಸ್‌ಪ್ ನಂ: 99726 03099

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 94486 33038


# ಮುಗಿಲು ಮುಟ್ಟಿದ ಪಂಚಮಸಾಲಿ ಆಕ್ರೋಶ

## ಪ್ರಾಣ ಕೊಟ್ಟೇವು ಮೀಸಲಾತಿ ಬಿಡೆವು ಎಂದ ಪಂಚಮಸಾಲಿ ಸಮಾಜ | ಮಾತು ತಪ್ಪಿದ ಕಾಂಗ್ರೆಸ್ ಸರ್ಕಾರ

## ಪಂಚಮಸಾಲಿಗರಲ್ಲೂ ಕಡುಬಡವರಿದ್ದಾರೆ ಕಣ್ತೆರೆದು ನೋಡಲಿ | ಮೀಸಲಾತಿ ಸಾಂವಿಧಾನಿಕ ಹಕ್ಕು

**■ ಹಂಪಿ ಟೈಮ್ಸ್ ಹೊಸಪೇಟೆ**

ದಶಕಗಳಿಂದ ಪಂಚಮಸಾಲಿ ಸಮಾಜದ ಬಡ ಮಕ್ಕಳಿಗೆ ಶೈಕ್ಷಣಿಕ ಮತ್ತು ಉದ್ಯೋಗಕ್ಕಾಗಿ 2ಎ ಮೀಸಲಾತಿಗೆ ಆಗ್ರಹಿಸಿ ಶಾಂತಿಯುತ ಹೋರಾಟ, ಪಾದಯಾತ್ರೆ ಮಾಡುತ್ತಾ ಬರಲಾಗುತ್ತಿದೆ. ನ್ಯಾಯಯುತ ಬೇಡಿಕೆ ಈಡೇರಿಕೆಗಾಗಿ ಹಲವು ಬಾರಿ ಸರ್ಕಾರಗಳ ಗಮನ ಸೆಳೆಯಲಾಗಿದೆ. ಪಂಚಮಸಾಲಿ ಜಗದ್ಗುರುಗಳನ್ನು, ಸಮಾಜದ ಮುಖಂಡರನ್ನು ಸಿಎಂ ಮಾತುಕತೆಗೆ ಕರೆದು ಪರಿಹಾರ ಸೂಚಿಸಬಹುದಿತ್ತು. ಪಂಚಮಸಾಲಿ ಸಮಾಜಬಾಂಧವರ ಮೇಲೆ ಲಾಠಿ ಚಾರ್ಜ್ ಮಾಡಿಸಿ ಸಂವಿಧಾನಾತ್ಮಕ ಹಕ್ಕನ್ನು ಕಾಂಗ್ರೆಸ್ ಸರ್ಕಾರ ಹತ್ತಿಕ್ಕುತ್ತಿದೆ. ಪಂಚಮಸಾಲಿ ಸಮಾಜ ಕಾಂಗ್ರೆಸ್‌ನ ನಡೆಗೆ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದೆ ಎಂದು ಪಂಚಮಸಾಲಿ ಸಮಾಜದ ರಾಜ್ಯ ಯುವ ಘಟಕದ ರಾಜ್ಯಾಧ್ಯಕ್ಷ ಕೊಟ್ರೇಶ್ ಕಿಚಿಡಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



ನಗರದ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಿಂದ ಜಿಲ್ಲಾಧಿಕಾರಿ ಕಾರ್ಯಾಲಯದವರೆಗೆ ಗುರುವಾರ ಬೆಳಗಾವಿಯಲ್ಲಿ 2ಎ ಮೀಸಲಾತಿ ಹೋರಾಟ ಹತ್ತಿಕ್ಕಲು ಅಮಾಯಕರ ಮೇಲಿನ ಲಾಠಿ ಚಾರ್ಜ್ ಖಂಡಿಸಿ ನಡೆಸಿದ ಪ್ರತಿಭಟನೆಯಲ್ಲಿ ಮಾತನಾಡಿದರು. ಎಲ್ಲಾ ಸಮಾಜಗಳಂತೆ ಪಂಚಮಸಾಲಿ ಸಮಾಜದಲ್ಲೂ ಕಡುಬಡವರಿದ್ದಾರೆ. ಕೃಷಿ ಕಾರ್ಮಿಕರ ಕುಟುಂಬಗಳು ಶೈಕ್ಷಣಿಕ ಹಾಗೂ ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಸರ್ವ ಸಮಾಜಗಳ ನಡುವೆ ಪಂಚಮಸಾಲಿ ಸಮಾಜ ಉತ್ತಮ ಬಾಂಧವ್ಯ ಹೊಂದಿದೆ. ಯಾರ ಹಕ್ಕನ್ನೂ ಕಸಿದುಕೊಳ್ಳಲು ಮೀಸಲಾತಿ ಕೇಳುತ್ತಿಲ್ಲ. ಸರ್ವರಿಗೂ ಸಮಬಾಳು, ಸಮಪಾಲು ಎನ್ನುವ ಸರ್ಕಾರಗಳು ಪಂಚಮಸಾಲಿ ಸಮಾಜದಲ್ಲಿನ ಬಡ ಕುಟುಂಬಗಳತ್ತ ಕಣ್ಣಾಯಿಸಬೇಕು. ನ್ಯಾಯಯುತ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕು. ಲಾಠಿ ಚಾರ್ಜ್ ಮಾಡಿದವರನ್ನು ಅಮಾನತ್ತುಗೊಳಿಸಬೇಕು. ಸಮಾಜದ ಜನರ ಮೇಲೆ ಹಾಕಲಾಗಿರುವ ಕೇಸುಗಳನ್ನು ಹಿಂಪಡೆದು, ಸಿಎಂ ಕ್ಷಮಾಪಣೆ ಕೇಳಬೇಕು ಎಂದು ಆಗ್ರಹಿಸಿದರು.

ಸಮಾಜದ ಹಿರಿಯ ಮುಖಂಡರಾದ ಎಚ್.ವಿ. ಶರಣಸ್ವಾಮಿ ಮಾತನಾಡಿ, ಪಂಚಮಸಾಲಿ ಸಮಾಜದ ಬೇಡಿಕೆ ನ್ಯಾಯಯುತವಾಗಿದೆ. ಸರ್ಕಾರ ಜಗದ್ಗುರುಗಳೊಂದಿಗೆ ಮಾತುಕತೆ ನಡೆಸಿ ಸೂಕ್ತ ಪರಿಹಾರ ಕಲ್ಪಿಸಬೇಕು. ಲಾಠಿ ಚಾರ್ಜ್ ಮಾಡಿರುವುದನ್ನು ಖಂಡಿಸುತ್ತೇವೆ ಎಂದರು. ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಎಲ್.ಬಸವರಾಜ ಮಾತನಾಡಿ, ಪಂಚಮಸಾಲಿ ಸಮಾಜ 2ಎ ಮೀಸಲಾತಿ ಹೋರಾಟ ನಡೆಸುತ್ತಾ ಬಂದಿರುವುದು ಇಂದು ನಿನ್ನೆಯದಲ್ಲ. ಸರ್ಕಾರ ಮೀಸಲಾತಿ ಹೋರಾಟವನ್ನು ಗಂಭೀರವಾಗಿ ಪರಿಗಣಿಸಬೇಕು. ರಾಜ್ಯದಲ್ಲಿ 2ಎ ಮೀಸಲಾತಿ, ಕೇಂದ್ರದಲ್ಲಿ ಒಬಿಸಿಗೆ ಸೇರ್ಪಡೆಗೆ ಅಗತ್ಯಕ್ರಮವಹಿಸಬೇಕು ಎಂದು ಆಗ್ರಹಿಸಿದರು. ಸಮಾಜದ ಮುಖಂಡರಾದ ರೇವಣಸಿದ್ದಪ್ಪ, ಮಧುರಚೆನ್ನಶಾಸ್ತ್ರಿ ಸೇರಿದಂತೆ ಮುಖಂಡರು ಮಾತನಾಡಿದರು. ನಂತರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರಿಗೆ ಮನವಿ ಸಲ್ಲಿಸಿದರು. ತಾಲೂಕಿನ ವಿವಿಧ ಗ್ರಾಮಗಳ ಮುಖಂಡರು ಇದ್ದರು.

# ಸೌಜನ್ಯವೂ ಇಲ್ಲದ ಸರ್ಕಾರ ಉಳಿಯದು 2ಎ ಮೀಸಲಾತಿ ಹೋರಾಟ ನಿಲ್ಲದು

## ಮಾರಣಾಂತಿಕ ಹಲ್ಲೆ ನಡೆಸಿರುವ ಎಡಿಜಿಪಿ ವಜಾಕ್ಕೆ ಆಗ್ರಹ



**■ ಹಂಪಿ ಟೈಮ್ಸ್ ಕೂಡ್ಲಿಗಿ**

ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಸಿಎಂ ಸಿದ್ದರಾಮಯ್ಯ ಉದ್ದೇಶ ಪೂರ್ವಕವಾಗಿ ಲಾಠಿ ಚಾರ್ಜ್ ಮಾಡಿಸಿರುವುದು ಖಂಡನೀಯ ಹಾಗೂ ಚಳವಳಿಗಾರರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಎಡಿಜಿಪಿ ಆರ್.ಹಿತೇಂದ್ರ ಅವರನ್ನು ಕೂಡಲೇ ವಜಾ ಮಾಡಬೇಕು ಎಂದು ಪಂಚಮಸಾಲಿ ಸಮಾಜದಿಂದ ಗುರುವಾರ ಗ್ರೇಡ್ 2 ತಹಸೀಲ್ದಾರ್ ವಿ. ಕೆ.ನೇತ್ರಾವತಿ ಮೂಲಕ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಬೆಳಗಾವಿ ಸುವರ್ಣ ವಿಧಾನ ಸೌಧದ ಬಳಿ ಮಂಗಳವಾರ ಅಧಿವೇಶನ ನಡೆಯುವ ವೇಳೆ ಪಂಚಮಸಾಲಿ ಜಗದ್ಗುರು ಜಯ ಮೃತ್ಯುಂಜಯ ಸ್ವಾಮಿಗಳ ನೇತೃತ್ವದಲ್ಲಿ ಸಾವಿರಾರು ಪಂಚಮಸಾಲಿ ಸಮುದಾಯದ ಮುಖಂಡರು 2ಎ ಮೀಸಲಾತಿ ನೀಡುವಂತೆ ಒತ್ತಾಯಿಸಿ, ಪ್ರತಿಭಟನೆ ನಡೆಸುವ ವೇಳೆ, ಸೌಜನ್ಯಕ್ಕೂ ತಮ್ಮ ಸಚಿವರ ಹಾಗೂ ಶಾಸಕರ ಮೂಲಕ ಮಾತುಕತೆಗೆ ಕರೆಯದೇ, ಏಕಾಏಕಿ ಪೊಲೀಸ್ ದರ್ಪ ತೋರಿಸಿ ಮನಬಂದತೆ ಮಾರಣಾಂತಿಕವಾಗಿ ಹಾಗೂ ತೀವ್ರ ಅಮಾನುಷವಾಗಿ ಲಾಠಿಯಿಂದ ಬಡೆದಿದ್ದಾರೆ. ಇದರಿಂದ ನೂರಾರು ಜನರಿಗೆ ಗಂಭೀರ ಗಾಯಗಳಾಗಿ ಆರೋಗ್ಯ ಚಿಂತಾಜನಕವಾಗಿದೆ, ಹೋರಾಟಗಾರರು ಕೈ, ಕಾಲು ಮುರಿದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದರಿಂದಾಗಿ ನಾಡಿನ ಲಕ್ಷಾಂತರ ಪಂಚಮಸಾಲಿ ಸಮಾಜದವರು ದುಃಖ ಅನುಭವಿಸುತ್ತಿದ್ದಾರೆ. ಈ ಘಟನೆಯನ್ನು ಇಡೀ ಸಮಾಜ ಖಂಡಿಸಿ ಕಾಂಗ್ರೆಸ್ ಪಕ್ಷ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮುಂದೆ ತಕ್ಕ ಉತ್ತರ ನೀಡಲಿದೆ ಎಂದು ಆಕ್ರೋಶ ಹೊರಹಾಕಿದರು.

ಪಂಚಮಸಾಲಿ ಲಿಂಗಾಯತರ ಹೋರಾಟವನ್ನು ಹತ್ತಿಕ್ಕಲು ಸಮುದಾಯದ ವಕೀಲರು, ರೈತರ ಮೇಲೆ ಹಲ್ಲೆ ನಡೆಸಿರುವ ಲಿಂಗಾಯತ ವಿರೋಧಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಕೂಡಲೇ ರಾಜಿನಾಮೆ ನೀಡಬೇಕು, ಎಡಿಜಿಪಿ ಆರ್. ಹಿತೇಂದ್ರ ಅಮಾನತು ಮಾಡಿ, ಸಮಾಜದ ಕ್ಷಮೆ ಯಾಚಿಸಬೇಕು, ಪಂಚಮಸಾಲಿ ಸಮಾಜದವರ ಮೇಲೆ ಕೇಸ್ ನ್ನು ವಾಪಸು ಪಡೆದು ಕ್ಷಮೆಯಾಚಿಸಬೇಕು. ಇಲ್ಲವಾದಲ್ಲಿ ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಮಾಜ ಉತ್ತರ ನೀಡಲಿದೆ ಎಂದು ಎಚ್ಚರಿಸಿದರು.

ಇದಕ್ಕೂ ಮುನ್ನ ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ನೂರಾರು ಪ್ರತಿಭಟನಕಾರರು ಅಂಬೇಡ್ಕರ್ ವೃತ್ತ, ಮದಕರಿ ವೃತ್ತದ ಮೂಲಕ ಕಾಂಗ್ರೆಸ್ ನೇತೃತ್ವದ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತ ತಾಲೂಕು ಕಚೇರಿಗೆ ಬಂದು ಮನವಿ ಸಲ್ಲಿಸಿದರು. ಪಂಚಮಸಾಲಿ ಸಮಾಜದ ಜಿಲ್ಲಾ ಗೌರವಾಧ್ಯಕ್ಷ ಎಂ.ಶಿವಣ್ಣ, ತಾಲೂಕು ಅಧ್ಯಕ್ಷ ಎಚ್.ರೇವಣ್ಣ, ಕಾರ್ಯದರ್ಶಿ ಎನ್.ಜಿ.ರಮೇಶ್, ಕೋಗಳಿ ಮಂಜುನಾಥ, ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು, ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ಸುನೀಲ್ ಗೌಡ, ಗುಳಿಗೆ ವೀರೇಶ್, ಟಿ.ಜಿ.ನಾಗರಾಜ ಗೌಡ, ಗಿರೀಶ್, ಮರುಳಸಿದ್ದಪ್ಪ, ಖಾನವಳಿ ಕೊಟ್ರೇಶ್, ಪಿ.ರಜನಿಕಾಂತ್, ಅಮಲಾಪುರ ಶರಣಪ್ಪ, ಲಕ್ಷ್ಮಿದೇವಿ, ರೇಖಾ ಮಲ್ಲಿಕಾರ್ಜುನ, ನಂದಿ ಬಸವರಾಜ, ಜಿ.ಆರ್. ಸಿದ್ದೇಶ್, ಎರಿಸ್ವಾಮಿ, ಚಿನ್ನಾಪ್ರಪ್ಪ, ತುಪ್ಪಳ್ಳಿ ಮೂಗಣ್ಣ ಸೇರಿದಂತೆ ಅನೇಕರು ಇದ್ದರು.

# ಬೆಳೆ ವಿಮೆ ನೋಂದಣಿಗೆ ಆಹ್ವಾನ

**■ ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿನ ಹಿಂಗಾರು ಹಾಗೂ ಬೇಸಿಗೆ ಹಂಗಾಮಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ರೈತರು ತಮ್ಮ ಕೃಷಿ ಬೆಳೆಗಳಿಗೆ ವಿಮೆ ನೋಂದಣಿ ಮಾಡಿಕೊಳ್ಳಬೇಕು.ರೈತರಿಗೆ ನೈಸರ್ಗಿಕ ಪ್ರಕೃತಿ ವಿಕೋಪಗಳಿಂದಾಗಿ ಬೆಳೆ ಹಾನಿಯಾದರೆ ವಿಮಾ ಯೋಜನೆಯಿಂದ ರೈತರಿಗೆ ಬಹಳಷ್ಟು ಅನುಕೂಲವಾಗಲಿದೆ ಎಂದು ಜಂಟಿ ಕೃಷಿ ನಿರ್ದೇಶಕ ಸೋಮಸುಂದರ್ ಅವರು ತಿಳಿಸಿದ್ದಾರೆ.

>>4


**ದಶಪಿಂಡ ಸಮಾರಾಧನೆ**



**ದಿ|| ಶ್ರೀಮತಿ ಶೀಲಾಬಾಯಿ ರಾಮಚಂದ್ರಸಾ ಕಾಟವಾ**

ನನ್ನ ಅರ್ಧಾಂಗಿನಿಯಾಗಿ, ಪ್ರೀತಿ ವಾತ್ಸಲ್ಯದೊಂದಿಗೆ ಕುಟುಂಬಕ್ಕೆ ಹೆಗಲಾಗಿ, ನಮ್ಮೆಲ್ಲರೊಂದಿಗೆ ಆದರ್ಶದ ಜೀವನ ನಡೆಸಿ, ಸರಳ ಸೌಜನ್ಯತೆಯ ಸಾಕಾರಮೂರ್ತಿಯಾಗಿದ್ದ ನಿನ್ನ ನೆನಪುಗಳು ನಮ್ಮ ಮನದಲ್ಲಿ ಅಜರಾಮರ. ನಿನ್ನ ದಿವ್ಯಾತ್ಮಕ್ಕೆ ಹೃತ್ಪೂರ್ವಕ ನಮನಗಳು.

ನನ್ನ ಧರ್ಮಪತ್ನಿಯಾದ **ಶ್ರೀಮತಿ ಶೀಲಾಬಾಯಿ ರಾಮಚಂದ್ರಸಾ ಕಾಟವಾ** ಇವರು ದಿ: 04-12-2024 ಬುಧವಾರ ರಂದು ತಮ್ಮ 63ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತನ್ನಿಮಿತ್ತ **ದಶಪಿಂಡ ಸಮಾರಾಧನೆಯನ್ನು ದಿನಾಂಕ 13-12-2024 ಶುಕ್ರವಾರ** ಮಧ್ಯಾನ: 1-30ಕ್ಕೆ ನಮ್ಮ ಹಳೇ ಹಗರಿಬೊಮ್ಮನಹಳ್ಳಿಯ ಸ್ವ-ಗೃಹದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕೆಂದು ಪ್ರಾರ್ಥನೆ.

**ದುಃಖತಪ್ತರು:**

**ಪತಿ: ಶ್ರೀ ರಾಮಚಂದ್ರಸಾ ನೀಲೂಸಾ ಕಾಟವಾ**

**ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಸಹೋದರ-ಸಹೋದರಿಯರು ಮತ್ತು ಆಪಾರ ಬಂಧು-ಬಳಗದವರು, ಹಗರಿಬೊಮ್ಮನಹಳ್ಳಿ, ವಿಜಯನಗರ ಜಿಲ್ಲೆ**


# ಕೊಪ್ಪಳ ಜಾತ್ರೋತ್ಸವಕ್ಕೆ ಸಿದ್ಧಗೊಳ್ಳುತ್ತಿರುವ ಮೈದಾನ

**■ ಹಂಪಿ ಟೈಮ್ಸ್ ಕೊಪ್ಪಳ**

ದಕ್ಷಿಣ ಭಾರತದ ಕುಂಭಮೇಳ ಎಂದು ಪ್ರಖ್ಯಾತಿ ಪಡೆದ ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವವು ಜನೇವರಿ 15, 2025 ರಂದು ಜರುಗುವ ಪ್ರಯುಕ್ತ ಜಾತ್ರಾ ಸಿದ್ಧತೆಗಳು ಭರದಿಂದ ಸಾಗಿವೆ.

ಗುರುವಾರ ರಥೋತ್ಸವ ಸಾಗುವ ಮೈದಾನ ಹಾಗೂ ಅಂಗಡಿ ಮುಂಗಟ್ಟುಗಳನ್ನು ಹಾಕುವ ಜಾತ್ರಾ ಆವರಣವನ್ನು ಇಟ್ಯಾಚಿ, ಡೋಜರ್ ಮತ್ತಿತರ ಯಂತ್ರಗಳ ನೆರವಿನಿಂದ ನೆಲವನ್ನು ಸಮತಟ್ಟು ಮಾಡಿ ಸ್ವಚ್ಛಗೊಳಿಸುವ ಕಾರ್ಯ ಕೆಲಸ ಬಿರುಸಿನಿಂದ ಸಾಗಿತು. ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ಈ ಜಾತ್ರೆಗೆ ಮುಂಜಾಗ್ರತವಾಗಿ ಸ್ವಚ್ಛತೆ ಸೇರಿದಂತೆ ಅನೇಕ ಕಾರ್ಯಗಳು ನಡೆಯುತ್ತಿದ್ದು, ಜಾತ್ರೆಗೆ ಹೆಚ್ಚಿನ ಮೆರಗು ತಂದುಕೊಡಲಿದೆ.



ಹಂಪಿ ಟೈಮ್ಸ್ HAMPI TIMES

## ಸ್ಟುಡೆಂಟ್ ಕಾಲಂ

# ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿ



ಒಂದು ಸುಂದರವಾದ ಬಡ ಕುಟುಂಬವಿತ್ತು. ಅದರಲ್ಲಿ ಅಪ್ಪ-ಅಮ್ಮ ಮತ್ತು ನಾಲ್ಕು ಜನ ಮಕ್ಕಳಿದ್ದರು. ನಾಲ್ವರಲ್ಲಿ ಮೂವರು ಹೆಣ್ಣುಮಕ್ಕಳು ಮತ್ತು ಒಬ್ಬನು ಗಂಡು ಮಗ ಇದ್ದರು. ಹೆಣ್ಣುಮಕ್ಕಳನ್ನು 10ನೇ ತರಗತಿಯವರೆಗೆ ಮಾತ್ರ ಓದಿಸೋಣ ಎಂದು ತಂದೆ ಯೋಚನೆ ಮಾಡಿದರು. ಆದರೆ ತಾಯಿ ಬೇಡ ಇನ್ನೂ ಮುಂದೆ ಓದಿಸೋಣ, ನಮ್ಮ ಮಕ್ಕಳ ಜೀವನ ಚೆನ್ನಾಗಿರುತ್ತೆ ಎಂದಳು. ಇದನ್ನು ಕೇಳಿದ ತಂದೆ ಪಿ.ಯು.ಸಿ.ವರೆಗೆ ಹೆಣ್ಣು ಮಕ್ಕಳನ್ನು ಓದಿಸಲು ಮುಂದಾದರು. ಆದರೆ ಹೆಣ್ಣು ಮಕ್ಕಳಿಗೆ ಇನ್ನೂ ಮುಂದೆ ಅಂದರೆ ಪದವಿ ಮತ್ತು ಸ್ನಾತಕ ಪದವಿ ಓದಬೇಕೆಂಬ ಆಸೆ ಇತ್ತು. ತಂದೆಯ ಮನಸ್ಥಿತಿಯಿಂದಾಗಿ ವಿದ್ಯಾಭ್ಯಾಸ ಮೊಟಕಾಗಿತ್ತು.

ತಂದೆ ಹೆಣ್ಣು ಮಕ್ಕಳ ಓದನ್ನು ನಿಲ್ಲಿಸಲು ಕಾರಣವೂ ಇತ್ತು. ಅದಕ್ಕೆ ಅಕ್ಕಪಕ್ಕದ ಮನೆಯವರ ಚಾಡಿಯೂ ಕಾರಣವಾಗಿತ್ತು. ಹೆಣ್ಣು ಮಕ್ಕಳನ್ನು ಹೆಚ್ಚು ಓದಿಸಿದರೆ ಅವರು ಹೇಳಿದ ಮಾತು ಕೇಳುವುದಿಲ್ಲ, ಅದಕ್ಕೆ ತಕ್ಕದಾದ ವರನನ್ನು ಹುಡುಕ ಬೇಕಾಗುತ್ತದೆ. ಅಲ್ಲದೇ ಓದಲು ಪೇಟೆಗೆ ಹೋದರೆ ಅಲ್ಲಿ ಹೆಣ್ಣು ಮಕ್ಕಳು ಕೆಟ್ಟು ಹೋಗ್ತಾರೆ ಎಂಬಂತಹ ಮಾತುಗಳು ತಂದೆ ಹೆಣ್ಣು ಮಕ್ಕಳ ಶಿಕ್ಷಣವನ್ನು ಮೊಟಕುಗೊಳಿಸಲು ಕಾರಣವಾಗಿದ್ದವು.




ಆದರೆ ಈಗಿನ ಕಾಲದಲ್ಲೂ ಹೆಣ್ಣು ಮಕ್ಕಳನ್ನು ಓದಿಸಲು ಇಷ್ಟೊಂದು ಕಾರಣಗಳು ಅಡ್ಡಿಯಾಗುತ್ತವೆ ಎಂದಾದರೆ ಹೆಣ್ಣು ಮಕ್ಕಳು ಕಲಿಯುವದೇ ತಪ್ಪು ಎನ್ನುವಂತಾಗಿದೆ. ನಮ್ಮ ಜೊತೆಗೆ ಇದ್ದು ನಮ್ಮ ಬೆನ್ನಿಗೆ ಚೂರಿ ಹಾಕುವವರೇ ಹೆಚ್ಚಾಗಿದ್ದಾರೆ. ಮನೆಯ ಮಕ್ಕಳ ಮನೋಸ್ಥಿತಿ ಅರಿಯದ ತಂದೆ ತಾಯಿಗಳು ಅಕ್ಕಪಕ್ಕದವರ ಮಾತು ಕೇಳಿ ತಮ್ಮ ಮಕ್ಕಳ ಜೀವನವನ್ನು ತಾವೇ ಹಾಳು ಮಾಡುವುದು ಎಷ್ಟರಮಟ್ಟಿಗೆ ಸರಿ.

ನಾವು ಕೊಟ್ಟ ಸಂಸ್ಕಾರ ಚೆನ್ನಾಗಿದ್ದರೆ ಮಕ್ಕಳು ಎಂದಿಗೂ ಕೆಡುವುದಿಲ್ಲ ಎಂಬ ನಂಬಿಕೆ ತಂದೆ ತಾಯಿಗಳಿಗೆ ಇರಬೇಕು. ನಿಮ್ಮ ಮಕ್ಕಳ ಮೇಲೆ ನಂಬಿಕೆಯನ್ನಿಟ್ಟು ಅವರಿಗೆ ವಿದ್ಯಾಭ್ಯಾಸ ಮಾಡಿಸಿ. ಏಕೆಂದರೆ ವಿದ್ಯೆ ಯಾರಪ್ಪನ ಸೊತ್ತೂ ಅಲ್ಲ. ಅದು ಸಾಧಕರ ಸೊತ್ತು. ವಿದ್ಯೆ ನಮ್ಮ ಹತ್ತಿರ ಇದ್ದರೆ ಎಂತಹ ಕಷ್ಟದ ಸಂದರ್ಭ ಬಂದರೂ ಸಹ ಅದನ್ನು ಎದುರಿಸುವ ಸಾಮರ್ಥ್ಯ ಬರುತ್ತದೆ. ಧೈರ್ಯ ಬೆಳೆಯುತ್ತದೆ. ಎಲ್ಲಾ ತಂದೆ ತಾಯಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ನಿಮ್ಮ ಮಕ್ಕಳ ಮೇಲೆ ನಂಬಿಕೆ ಇಟ್ಟು ಓದಲು ಕಳಿಸಿ. ಅವರಿಗೆ ಪ್ರೋತ್ಸಾಹ ನೀಡಿ. ಮುಂದೆ ಅವರೇ ನಿಮ್ಮ ಜೀವನಕ್ಕೆ ದಾರಿಯಾಗುತ್ತಾರೆಯೇ ವಿನಹ ಅಕ್ಕಪಕ್ಕದವರಲ್ಲ.

– ಕೀರ್ತನಾ ಹಿರೇಮಠ. ದ್ವಿತೀಯ ಪಿ.ಯು.ಸಿ.
ಶ್ರೀ ಸಾಯಿ ಪದವಿ ಪೂರ್ವ ಮಹಾವಿದ್ಯಾಲಯ. ಧಾರವಾಡ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಬದುಕಿನ ಸತ್ಯವನರಿತವನೇ ನಿಜವಾದ ಹಣವಂತ




ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮ...ಎಂಬ ವಾಕ್ಯವನ್ನು ಗೋವಿನ ಹಾಡಿನಲ್ಲಿ ನಾವು ಕೇಳಿದ್ದೇವೆ. ಸತ್ಯಂಶಿವಂಸುಂದರಂ ಎಲ್ಲಿ ಸತ್ಯವಿದೆಯೋ ಅಲ್ಲಿ ಶಿವನಿದ್ದಾನೆ. ಎಲ್ಲಿ ಶಿವನಿದ್ದಾನೋ ಅಲ್ಲಿ ಸೌಂದರ್ಯವಿದೆ. ಇದು ನಮ್ಮ ನಡೆನುಡಿಗೂ ಅನ್ವಯಿಸುತ್ತದೆ. ಸತ್ಯಂ ವದ, ಧರ್ಮಂ ಚರ ಸತ್ಯ-ಧರ್ಮ ಒಂದು ನಾಣ್ಯದ ಎರಡು ಮುಖಗಳು. ಎರಡನ್ನೂ ಸಮವಾಗಿ ಅರಿತವನೇ ಮನುಷ್ಯ. ಅದೇ ರೀತಿ ಹಣಕ್ಕಾಗಿ ಬದುಕಬೇಕೋ ಬದುಕಿಗಾಗಿ ಹಣಬೇಕೋ ಎರಡೂ ಒಂದಕ್ಕೊಂದು ಪೂರಕ. ಸಹಜವಾಗಿ ಹಣವಂತನೆಂದರೆ ಬಂಗಾರ, ಬೆಳ್ಳಿ, ಭೂಮಿ, ನಾಲ್ಕಾರು ಕಾರು, ಸ್ಕೂಟರ್, ಬಂಗಲೆ, ಆಳುಗಳೊಂದಿಗೆ ಕೋಟ್ಯಾಧೀಶನೆಂಬ ಕೀರೀಟ. ಇವುಗಳು ಅಧಿಕವಾದಷ್ಟು ಭಯದ ನೆರಳಿನಲ್ಲಿ ಕಾಪಾಡಿಕೊಳ್ಳುವ ಚಿಂತೆ ಶುರು.

ಹುಟ್ಟಿರುವುದೇ ಹಣ ಸಂಗ್ರಹಕ್ಕಾಗಿ ಎಂಬ ಅಹಂ ಸಲ್ಲದು. ಬದುಕು ಹಣಕ್ಕಿಂತಲೂ ಎಷ್ಟೊಂದು ವಿಶಾಲ. ಅದಕ್ಕಾಗಿ ಪ್ರಜ್ಞಾವಂತ, ಸುಸಂಸ್ಕೃತ, ಸಂಸ್ಕಾರವಂತನಾಗಿ ಬಾಳಬೇಕು. ಹಣದ ಪಿತ್ತ ನೆತ್ತಿಗೇರಿದಾಗ ಎಲ್ಲರೂ ಕ್ಷುಲ್ಲಕರಾಗಿ ಕಾಣಿಸುತ್ತಾರೆ. ಸ್ವಾರ್ಥದ ಭಾವ ಹೆಚ್ಚಾಗಿ ಸಮಾಜದಲ್ಲಿ ಭಯವಿಲ್ಲದ (ಗೂಳಿಯ) ವರ್ತನೆ ಸಹಜವಾಗುತ್ತದೆ. ಬೇಂದ್ರೆಯವರು ಹೇಳಿದಂತೆ ಕುರುಡು ಕಾಂಚಾಣ ಕುಣಿಯುತ್ತಲಿತ್ತ ಕಾಲಿಗೆ ಬಿದ್ದವರ ತುಳಿಯುತಲಿತ್ತೋ.. ಕೆಲವರು ಭ್ರಷ್ಟಾಚಾರದಿಂದ ಹಣ ಸಂಪಾದಿಸಿ ದೇವರ ಹುಂಡಿಗೆ ಹಾಕುತ್ತಾರೆ, ದೇವರ ಸೇವೆಗೆ ದಾನ ನೀಡುತ್ತಾರೆ. ಇಂಥವರ ಕಂಡಿರುವ ಬಸವಣ್ಣನವರು ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ ಎಂದು ಹೇಳಿದ್ದಾರೆ. ಹಾಗೆಯೇ ಅರ್ಥರೇಖೆಯಿದ್ದಲ್ಲಿ ಫಲವೇನು; ಆಯಷ್ಯರೇಖೆ ಇಲ್ಲದನ್ನಕ್ಕ? ಎನ್ನುವಂತೆ ಹಣದ ಸಂಗ್ರಹ ನಿಯತ್ತಿನ ದುಡಿಮೆಯಿಂದ ಬಂದಿದ್ದಲ್ಲಿ ಸಮಾಜದ ಒಳಿತಿಗಾಗಿ ವಿನಿಯೋಗಿಸಬೇಕೆ ಹೊರತು ಬಚ್ಚಿಡಬಾರದು.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

ಹಣದಲ್ಲಿ ತಾನೆಷ್ಟು ದೊಡ್ಡವನೆಂದು ತೋರಿಸಲು ಒಂದುದಿನ ಶ್ರೀಮಂತ ತನ್ನ ಮಗನನ್ನು ಹಳ್ಳಿಗೆ ಕರೆದೊಯ್ದು ತೋರಿ ಸಿದ. ಮರು ದಿನ ಆ ಪರಿಸರ ಏನನ್ನಿಸಿತು? ಎಂದು ಪ್ರಶ್ನಿಸಿದ. ಮಗ ಉತ್ತರಿಸಿದ: ನಮ್ಮ ದೊಡ್ಡ ಮನೆ ಬೆಳಗಲು ಕೇವಲ ಬಲ್ಬಗಳಿವೆ. ಅವರು ಸೂರ್ಯಚಂದ್ರರ ಬೆಳಕಿನಲ್ಲಿದ್ದಾರೆ. ನಾವು ಆಹಾರ ಖರೀದಿಸುತ್ತೇವೆ. ಅವರು ಆಹಾರವನ್ನೇ ಬೆಳೆಯುತ್ತಾರೆ. ನಾವು ಮನೆಯಲ್ಲಿ ನಾಲ್ಕೇ ಜನರಿದ್ದೇವೆ. ಅವರು ಊರಿನ ಬಂಧುಬಳಗ ಸ್ನೇಹಿತ ರೊಂದಿಗೆ ಬದುಕುತ್ತಿದ್ದಾರೆ. ರಕ್ಷಣೆಗಾಗಿ ನಾವು ಬಲವಾದ ಗೋಡೆ ಹಾಗೂ ಸೆಕ್ಯೂರಿಟಿಯನ್ನಿಟ್ಟಿದ್ದೇವೆ. ಅವರಿಗೆ ಇಡೀ ಊರೇ ರಕ್ಷಣೆಗಿದೆ. ಹಾಗಾಗಿ ಅಪ್ಪಾ ನಿನಗೆ ಧನ್ಯವಾದಗಳು. ಈಗ ಗೊತ್ತಾಯ್ತು ನಾವೆಷ್ಟು ಅವರಿಗಿಂತ ಬಡವರಿದ್ದೇವೆ ಎಂಬುದು. ಹಣ ಸಂಪಾದನೆ ಎಷ್ಟಿದ್ದರೂ ಕೆಲವರಿಗೆ ಅದರ ದಾಹ ತೀರು ವುದಿಲ್ಲ.

**ಇಷ್ಟು ದೊರಕಿದರೆ ಮತ್ತಷ್ಟು ಬೇಕೆಂಬಾಸೆ**
**ಅಷ್ಟು ದೊರಕಿದರೆ ಮತ್ತಷ್ಟರಾಸೆ**
**ಕಷ್ಟ ಬೇಡೆಂಬಾಸೆ ಕಡುಸುಖವ ಕಾಂಬಾಸೆ**

ಎಂದು ಪುರಂದರಾದಾಸರು ಹೇಳಿದಂತೆ ಅತಿಯಾಸೆ ಎಷ್ಟು ಕೆಟ್ಟದ್ದೆಂದರೆ, ದೈವಾನುಗ್ರಹದಿಂದ ದಿನಕ್ಕೊಂದು ಬಂಗಾರದ ಮೊಟ್ಟೆ ಇಡುವ ಕೋಳಿಯನ್ನು ಕಂಡವನು ತಾಳ್ಮೆ ಕಳೆದುಕೊಂಡ. ಬೇಗ ಕೋಟ್ಯಾದೀಶನಾಗಬೇಕೆಂಬ ದುರಾಸೆಯ ಆತುರದಲ್ಲಿ ಒಂದುದಿನ ಕೋಳಿಯ ಹೊಟ್ಟೆಯನ್ನೇ ಸೀಳಿದ. ಏನೂ ಸಿಗಲಿಲ್ಲ...!?ಒಂದು ಹಂತದವರೆಗೆ ಹಣ ಬೇಕು. ಆದರೆ ಹಣವೇ ಸರ್ವಸ್ವವೆಂಬ ಭಾವನೆ ಮೂರ್ಖತನ. ಹಣದ ಹಿಂದೆ ನಾವು ಹೋಗುವುದಕ್ಕಿಂತ ಹಣವೇ ನಮ್ಮ ಹಿಂದೆ ಬರುವಂತಹ ಪ್ರತಿಭೆಯನ್ನು ಜೀವನದಲ್ಲಿ ಬೆಳೆಸಿಕೊಳ್ಳಬೇಕು.

ಯಾರಿಗೆ ರಾತ್ರಿ ನಿದ್ರೆಮಾತ್ರೆ ಹಾಗು ಬೆಳಿಗ್ಗೆ ಅಲಾರಾಂ ಅವಶ್ಯಕತೆ ಇಲ್ಲವೋ ಆತ ನಿಜವಾದ ಹಣವಂತ. ಯಾರು ನಡವಳಿಕೆಯಲ್ಲಿ ಭಕ್ತಿ, ಪ್ರೀತಿ, ಸೌಜನ್ಯ, ಗೌರವ ಕಾಪಾಡಿಕೊಂಡಿರುತ್ತಾನೋ ಅವನೇ ದೊಡ್ಡ ಹಣವಂತ. ಏನೇಆಗಲಿ ಹಣವಿಲ್ಲದವನು ಹೆಣಕ್ಕಿಂತ ಕಡೆ ಎಂಬುದು ನಿಜವಾದರೂ ಮನುಷ್ಯತ್ವವಿಲ್ಲದವನು ಅದಕ್ಕಿಂತಲೂ ಕಡೆ ಅಲ್ಲವೇ?

# ಸಾರ್ಥಕ ಜೀವನಕ್ಕೆ ಕೆಲ ಗುರಿಗಳು

ಸುಂದರವಾದ ನವಿಲೊಂದು ಗರಿ ಬಿಚ್ಚಿ ನರ್ತಿಸಿದಾಗ ನೋಡಲು ಕಣ್ಣಿಗೆ ಹಬ್ಬ, ಮನಕ್ಕೆ ಮುದ,ತೀರದ ಆನಂದ ಅಲ್ಲವೇ?

ಅಂತೆಯೇ ಜೀವನದಲ್ಲಿ ಸಂತಸವೆಂಬ ನವಿಲು ಗರಿ ಬಿಚ್ಚಿ ಕುಣಿದಾಡಲು ಗುರಿ ಎಂಬ ಗರಿಗಳನ್ನು ಒಪ್ಪವಾಗಿಸಿಕೊಳ್ಳಬೇಕಲ್ಲವೇ!

ಜೀವನದಲ್ಲಿ ಸಂತಸವೇ ಎಲ್ಲಕ್ಕಿಂತಲೂ ಮಿಗಿಲು ಎನ್ನುವುದಾದರೆ ಅಂತಹ ಸಂತಸದ ಜೀವನವನ್ನು ಸಾಗಿಸಲು ನಾವು ಕೆಲ ಗುರಿಗಳೆಂಬ ಗರಿಗಳನ್ನು ಬದುಕಿನ ರೆಕ್ಕೆಯಲ್ಲಿ ಅಳವಡಿಸಿಕೊಳ್ಳಬೇಕು.

ಹಾಗಾದರೆ ಆ ಗುರಿಗಳು ಯಾವುವು?

**ವೃತ್ತಿಯ ಗುರಿ ( ಕರಿಯರ್ ಗೋಲ್ )...**

ನಮ್ಮ ಬದುಕನ್ನು ನಡೆಸಲು ನಾವು ಕೈಗೊಳ್ಳಬಹುದಾದ ವೃತ್ತಿಯ ಕುರಿತಾದ ಒಂದು ಗುರಿ. ನಮಗೆ ಒಳ್ಳೆಯ ಉದ್ಯೋಗವನ್ನು ದೊರಕಿಸಿ ಕೊಡುವ ವಿದ್ಯೆಯನ್ನು ಕಲಿಯಲು ಅತ್ಯವಶ್ಯಕವಾದ ಜಾಣ್ಮೆಯನ್ನು ರೂಢಿಸಿಕೊಳ್ಳುವ ಮತ್ತು ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿ ಯಶಸ್ಸನ್ನು ಪಡೆಯುವ ಗುರಿ ನಮ್ಮದಾಗಿರಬೇಕು.

**ಆರ್ಥಿಕ ಸ್ಥಿರತೆಯ ಗುರಿ...** ಹಣ ಕೊಡುವಷ್ಟು ಆತ್ಮವಿಶ್ವಾಸವನ್ನು, ಧೈರ್ಯವನ್ನು ಮತ್ತಾವುದೂ ಕೊಡುವುದಿಲ್ಲ.ಜೀವನದಲ್ಲಿ ಹಣವೇ ಮುಖ್ಯವಲ್ಲ ಎಂದು ಭಾವಿಸುವ ಪ್ರತಿಯೊಬ್ಬರೂ ಕೂಡ ಹಣವನ್ನು ಗಳಿಸಿದ ಮೇಲೆ ಈ ರೀತಿ ಯೋಚಿಸುತ್ತಾರೆಯೇ ಹೊರತು ಮೊದಲಲ್ಲ. ಹಣವೇ ಎಲ್ಲವೂ ಅಲ್ಲ ನಿಜ, ಆದರೆ ಹಣವಿಲ್ಲದೆ ಬದುಕು ನಡೆಯುವುದಿಲ್ಲ ಎಂಬುದು ಕೂಡ ಅಷ್ಟೇ ದಿಟವಲ್ಲವೇ?

ಮನುಷ್ಯ ತಾನು ದುಡಿಯುವ ಹಣದಲ್ಲಿ ಕೌಟುಂಬಿಕ ಖರ್ಚು ವೆಚ್ಚಗಳಿಗೆ, ತಂದೆ-ತಾಯಿಯರ ಪಾಲನೆಗೆ, ಮುಂದಿನ ಭವಿಷ್ಯದ ಉಳಿತಾಯಕ್ಕೆ ಒಂದಷ್ಟು ಹಣವನ್ನು ಸದಾ ಕಣ್ಣಲ್ಲಿ ಇಟ್ಟುಕೊಳ್ಳಬೇಕಾದದ್ದು ಅತ್ಯವಶ್ಯಕ.ಇದರ ಜೊತೆ ಜೊತೆಗೆ ಅವಶ್ಯವಿದ್ದಲ್ಲಿ ಸಾಮಾಜಿಕ ಸೇವಾ ಕೆಲಸಗಳಲ್ಲಿ ತನ್ನ ದುಡಿಮೆಯ ಒಂದಷ್ಟು ಭಾಗವನ್ನು ಮೀಸಲಿಡಬೇಕು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

**ಸಾಮಾಜಿಕ ಗುರಿ....** ಮನುಷ್ಯ ಸಮಾಜ ಜೀವಿ. ನಾವು ಹುಟ್ಟಿದ, ಬೆಳೆದ ಬದುಕುತ್ತಿರುವ ಈ ಸಮಾಜಕ್ಕೆ ನಾವು ನಮ್ಮದೇ ಆದ ಕಾಣಿಕೆಗಳನ್ನು

ಸಮಾಜಕ್ಕೆ ನೀಡುವುದು ನಮ್ಮ ಕರ್ತವ್ಯ. ನಮಗಿಂತ ಕೆಳಮಟ್ಟದಲ್ಲಿರುವ ಜನರ ಬದುಕನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ, ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಧಾರ್ಮಿಕ ವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕ ವಾಗಿ ನಮ್ಮನ್ನು ನಾವು ರಚನಾತ್ಮಕವಾಗಿ ತೊಡಗಿಸಿಕೊಳ್ಳಬೇಕು. ವೈಯುಕ್ತಿಕ ಹಿತಾಸಕ್ತಿಯ

ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ನಾವು ಬದ್ಧತೆಯಿಂದ ಸ್ವೀಕರಿಸಿ ನಿರ್ವಹಿಸಬೇಕು. ಸಮಾಜ ಸೇವೆ ಸಾಮಾಜಿಕ ಜವಾಬ್ದಾರಿಯಾಗಿ ಪರಿವರ್ತಿತವಾದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂಬ ಅರಿವನ್ನು ಹೊಂದಿರಬೇಕು.

ಮೊದಲೆರಡು ಗುರಿಗಳನ್ನು ಸಾಧಿಸಿದಾಗ ಮಾತ್ರ ಮೂರನೇ ಗುರಿ ನಮಗೆ ಸುಲಭ ಸಾಧ್ಯವಾಗುತ್ತದೆ.

**ಉತ್ತಮ ಸಂಬಂಧಗಳ ನಿರ್ವಹಣೆಯ ಗುರಿ..** ಮೂಲತಃ ಮನುಷ್ಯ ಭಾವನಾಜೀವಿ. ಭಾವನೆಗಳಲ್ಲಿಯೇ ಬದುಕುವ ಮನುಷ್ಯ ಎಷ್ಟೋ ಬಾರಿ ತನ್ನ ಸಂಬಂಧಗಳನ್ನು ನಿರ್ವಹಿಸುವಲ್ಲಿ ಎಡವುತ್ತಾನೆ. ಮಾನಸಿಕ ಮತ್ತು ಭಾವನಾತ್ಮಕ ಬದುಕಿನ ಸುಧಾರಣೆಗೆ ನಾವು ಪ್ರೀತಿ, ವಿಶ್ವಾಸ, ನಂಬಿಕೆ ಮತ್ತು ಸೌಹಾರ್ದತೆಗಳನ್ನು ನಮ್ಮ ಸಂಬಂಧಗಳಲ್ಲಿ ಹೊಂದಿರಬೇಕು. ಎಲ್ಲ ರೀತಿಯ ಭೌತಿಕ ಸಂಪತ್ತುಗಳು ಇದ್ದರೂ ಮಾನಸಿಕ ವಾಗಿ ವ್ಯಕ್ತಿ ಕುಗ್ಗುವುದು ಭಾವನಾತ್ಮಕ ಸಂಬಂಧಗಳ ಕೊರತೆಯಿಂದ ಎಂಬುದರ ಅರಿವನ್ನು ಹೊಂದಿದ್ದು ಉತ್ತಮ ಕೌಟುಂಬಿಕ ಮತ್ತು ಸಾಮಾಜಿಕ ಬಾಂಧವ್ಯವನ್ನು ಹೊಂದಿರ ಬೇಕು..... ಇದರ ಜೊತೆಗೆ ಬಾಂಧವ್ಯಗಳಲ್ಲಿನ ಇತಿಮಿತಿ ಗಳನ್ನು ಕೂಡ ಅರಿತಿದ್ದರೆ ಮತ್ತಷ್ಟು ಒಳ್ಳೆಯದು.

**ಒಳ್ಳೆಯ ಆರೋಗ್ಯದ ಗುರಿ...** ಉತ್ತಮ ಮಾನಸಿಕ ಮತ್ತು ದೈಹಿಕ ಸ್ಥಿತಿಯಲ್ಲಿಯೇ ನಮ್ಮ ಆರೋಗ್ಯ ಅಡಗಿದೆ. ನಮ್ಮ ದೈನಂದಿನ ಬದುಕಿನಲ್ಲಿ ಒಳ್ಳೆಯ ಆಹಾರ ಕ್ರಮ, ವ್ಯಾಯಾಮ, ಯೋಗ ನಡಿಗೆ ಮುಂತಾದವುಗಳನ್ನು ಅಳವಡಿಸಿಕೊಳ್ಳಬೇಕು. ದೈಹಿಕ ಆರೋಗ್ಯಕ್ಕೆ ಯೋಗ ಮತ್ತು ವ್ಯಾಯಾಮಗಳಾದರೆ ಮಾನಸಿಕ ಆರೋಗ್ಯಕ್ಕೆ ಧ್ಯಾನ, ಭಜನೆ, ಸತ್ಸಂಗಗಳು ಬೇಕು.

ಧ್ಯಾನ ಭಜನೆ ಮಾಡಲು ನಾವೇನು ಮುದುಕರೇ? ಎಂಬ ಭಾವ ಖಂಡಿತ ಬೇಡ. ಪ್ರಸ್ತುತ ದಿನಮಾನಗಳಲ್ಲಿ ವಯಸ್ಕರಿಗಿಂತ ಹೆಚ್ಚಾಗಿ ಧ್ಯಾನದ ಅವಶ್ಯಕತೆ ಯೌವನದಲ್ಲಿದ್ದಾಗ ಹೆಚ್ಚು. ಆಧುನಿಕ ಜೀವನ ತಂದೊಡ್ಡುವ ಹತ್ತು ಹಲವು ಸವಾಲುಗಳನ್ನು ಎದುರಿಸಲು ಮಾನಸಿಕ ಸ್ಥಿರತೆ ಮತ್ತು ಶಾಂತ ಮನಸ್ಥಿತಿಯನ್ನು ಪಡೆಯಲು ಧ್ಯಾನ, ಆಧ್ಯಾತ್ಮಿಕ ಚಿಂತನೆಗಳ ಅನಿವಾರ್ಯತೆ ಇಂದಿನ ಯುವ ಜನಾಂಗಕ್ಕೆ ಇದೆ.

**ನೆಮ್ಮದಿಯ ಜೀವನದ ಗುರಿ....** ಮನುಷ್ಯನ ಜೀವನದಲ್ಲಿ ಆತನ ಪ್ರಥಮ ಮತ್ತು ಅಂತಿಮ ಉದ್ದೇಶ ಸಂತೋಷವಾಗಿರುವುದು. ಸಂತಸ ನಮ್ಮ ಗಮ್ಯ ಸ್ಥಾನವಲ್ಲ. ಅದೊಂದು ಪಯಣ... ಬದುಕಿನ ಹಾದಿಯಲ್ಲಿ ಬರುವ ಎಲ್ಲ ಏರಿಳಿತಗಳನ್ನು ಅನುಭವಿಸುತ್ತಾ ಇದ್ದುದರಲ್ಲಿಯೇ ನೆಮ್ಮದಿಯನ್ನು ಪಡೆಯುತ್ತಾ ಸಾಗುವ ಸುಧೀರ್ಘ ಪಯಣ ಜೀವನ. ನಮ್ಮವರೊಂದಿಗಿನ ಪ್ರೀತಿ ವಿಶ್ವಾಸದ ಮತ್ತು ಹೊಂದಾಣಿಕೆಯ ಬದುಕು, ಇರುವುದರಲ್ಲಿಯೇ ತೃಪ್ತಿಪಡುವ ಮನಸ್ಥಿತಿ,ಆಶೀರ್ವದಿಸುವ ಹಿರಿಯರು ಪ್ರೀತಿಸುವ ಸಂಗಾತಿ ಮತ್ತು ಗೌರವಿಸುವ ಮಕ್ಕಳು, ಉತ್ತಮ ನೆರೆಹೊರೆ ಒಳ್ಳೆಯ ಪರಿಸರ ಇಷ್ಟಿದ್ದರೆ ಸಾಕಲ್ಲವೇ ಬದುಕಿಗೆ ನೆಮ್ಮದಿಯನ್ನು ಕೊಡಲು?



ಬೇಕು ಎಂದು ಬಯಸುವ ವ್ಯಕ್ತಿಗೆ ಆತನ ಎತ್ತರಕ್ಕೆ ಸಂಪತ್ತನ್ನು ತಂದು ಸುರಿದರೂ ತೃಪ್ತಿ ಸಿಗದು, ತಟ್ಟೆ ತುಂಬಾ ಊಟ ಮಾಡಿದ ವ್ಯಕ್ತಿಗೆ ಮತ್ತೇನು ಬೇಡ ಹೇಳಲು ಕಾರಣ ಸಂತೃಪ್ತಿ. ಕೋಟಿಗಟ್ಟಲೆ ಹಣವಿದ್ದರೂ ಮನುಷ್ಯ ತನ್ನ ಹೊಟ್ಟೆಗೆ ತಿನ್ನುವುದು ಅನ್ನವನ್ನೇ ಹೊರತು ಚಿನ್ನವನ್ನಲ್ಲ, ಕೋಟ್ಯಂತರ ಬೆಲೆ ಬಾಳುವ ಕಾರಿನಲ್ಲಿ ಕುಳಿತವನು ಕೂಡ ತನ್ನ ಬದುಕಿನ ಅಂತಿಮ ಯಾತ್ರೆಯಲ್ಲಿ ನಾಲ್ಕು ಜನರ ಹೆಗಲ ಮೇಲೆಯೇ ಹೋಗುವುದು.

ಆಶಾಶ್ವತವಾದ ಈ ಬದುಕಿನಲ್ಲಿ ಸ್ಥಿರವಾದ ನೆಮ್ಮದಿ ಪಡೆಯಲು ಉತ್ತಮ ಗುರಿಗಳನ್ನು ಹಾಕಿಕೊಂಡು ಯಶಸ್ಸು ಮತ್ತು ಸಂತೃಪ್ತತೆಯನ್ನು ಪಡೆಯಬೇಕು. ಸುತ್ತಲಿನ ನಮ್ಮ ನೆರೆಹೊರೆಯವರೊಂದಿಗೆ ಸೌಹಾರ್ದಯುತ ಜೀವನವನ್ನು ನಡೆಸುವುದು ನಮ್ಮ ಬದುಕಿನ ಧ್ಯೇಯವಾಗಲಿ ಎಂಬ ಆಶಯದೊಂದಿಗೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಮೂರು ದಶಕದಿಂದ 2ಎ ಮೀಸಲಾತಿಗಾಗಿ ಹೋರಾಟ

## ಕಾಂಗ್ರೆಸ್ ಸರ್ಕಾರದ ವಿರುದ್ಧ ಪಂಚಮಸಾಲಿ ಸಮಾಜ ಆಕ್ರೋಶ | ಕೈ ಸರ್ಕಾರ ಪಶ್ಚಾತ್ತಾಪ ಪಡುವ ದಿನಗಳು ದೂರ ಇಲ್ಲ ಎಂದ ಪ್ರತಿಭಟನಾಕಾರರು

## ಜೇನುಗೂಡಿನಂತಿರುವ ಪಂಚಮಸಾಲಿ ಸಮಾಜಕ್ಕೆ ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕಲ್ಲೆಸೆದಿದೆ : ತಾಲೂಕಧ್ಯಕ್ಷ ಚಾಪಿ ಚಂದ್ರಪ್ಪ ಆಕ್ರೋಶ

■ ಹಂಪಿ ಟೈಮ್ಸ್ ಕೊಟ್ಟೂರು.

ಬೆಳಗಾವಿಯಲ್ಲಿ ಪಂಚಮಸಾಲಿ ಬಾಂಧವರ ಮೇಲೆ ನಡೆದ ಲಾಠಿ ಚಾರ್ಜ್ ಖಂಡಿಸಿ, ಲಿಂಗಾಯಿತರನ್ನು ಹತ್ತಿಕ್ಕುವ ಹುನ್ನಾರ ಸಿಎಂ ಸಿದ್ದರಾಮಯ್ಯರದ್ದಾಗಿದೆ. ಲಿಂಗಾಯಿತರ ವಿರೋದಿ ಮುಖ್ಯಮಂತ್ರಿ ಎನ್ನುವ ನುಡಿಗೆ ಆ ದೌರ್ಜನ್ಯ, ಕೃತ್ಯ ಸಾಕ್ಷಿಯಾಗಿದೆ ಎಂದು ಪಂಚಮಸಾಲಿ ಸಮಾಜದ ಮುಖಂಡ ಅಂಗಡಿ ಪಂಪಾಪತಿ ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ಪಟ್ಟಣದಲ್ಲಿ ವೀರಶೈವ ಲಿಂಗಾಯಿತ ಪಂಚಮಸಾಲಿ ಸಮಾಜ ಕೊಟ್ಟೂರು ತಾಲೂಕು ಘಟಕ ಪಂಚಮ ಸಾಲಿ ಸಮಾಜದ ಮೇಲೆ ನಡೆದ ಲಾಠಿ ಚಾರ್ಜ್ ಖಂಡಿಸಿ, ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ವಿರುದ್ದ ಕೈಗೊಂಡ ಪ್ರತಿಭಟನೆಯಲ್ಲಿ ಮಾತನಾಡಿದರು.ಕ್ರಾಂತಿಕಾರಿ ಸ್ವತಂತ್ರಹೋರಾಟಗಾರ್ತಿ ವೀರರಾಣಿ ಕಿತ್ತೂರ ಚೆನ್ನಮಾಜಿ ರಕ್ತ ಹಂಚಿಕೊಂಡು ಹುಟ್ಟಿದ ಮಕ್ಕಳು ನಾವೀದ್ದೀವಿ ನೆನಪಿರಲಿ, ನಮ್ಮ ಹಕ್ಕಿಗಾಗಿ, 2ಎ ಮೀಸಲಾತಿಗಾಗಿ ಕ್ರಾಂತಿ ಮತ್ತೆ ಮರು ಕಳಿಸುತ್ತೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಪಂಚಮಸಾಲಿ ಸಮಾಜದ ತಾಲೂಕು ಘಟಕ ಅಧ್ಯಕ್ಷ ಚಾಪಿ ಚಂದ್ರಪ್ಪ ಮಾತನಾಡಿ, ಪಂಚಮಸಾಲಿಗರು ಶಾಂತಿ ಪ್ರಿಯರು, ಸೌಮ್ಯ ಸ್ವಭಾವದವರು, ಜೇನು ಗೂಡಿನಂತಹ ಸಮಾಜ ಈ ಬೃಹತ್ ಸಮಾಜಕ್ಕೆ ಸಿದ್ದರಾಮಯ್ಯ ಸರ್ಕಾರ ಕಲ್ಲೆಸೆದಿದೆ, ಈ ಸಮಾಜಕ್ಕೆ 2ಎ ಮೀಸಲಾತಿ ಘೋಷಿಸದಿದ್ರೆ, ಪ್ರಾಯಾಶ್ಚಿತ್ತಪಡುವ ದಿನ ಶೀಘ್ರ ಎದುರಾಗಲಿದೆ ಎಂದು ಕಿಡಿಕಾರಿದರು.



ಪಂಚಮಸಾಲಿ ಸಮಾಜದ ಮುಖಂಡರು ಶೆಟ್ಟಿ ತಿಂದಪ್ಪ ಪಂಚಮಸಾಲಿ 2ಎ ಮೀಸ ಲಾತಿ ಹೋರಾಟ 1994ರಿಂದ ವರ್ಷಗಳ ಬೇಡಿಕೆ, ನಮ್ಮ ಬೇಡಿಕೆ ಈಡೇರದಿದ್ದರೆ ಮುಂದಿನ ದಿನಗಳಲ್ಲಿ ಬೆಂಗಳೂರ ವಿಧಾನಸೌದಕ್ಕೆ ಮುತ್ತಿಗೆ ಹಾಕಬೇಕಾಗುತ್ತೆ ಎಂದರು.

ಪಂಚಮಸಾಲಿ ಸಮಾಜದ ಮುಖಂಡರು ನಿವೃತ್ತ ಶಿಕ್ಷಕರು ನಂಜುನಗೌಡ ಪಂಚಮ ಸಾಲಿ ಸಮಾಜದ ಮೇಲೆ ಸಿದ್ದರಾಮಯ್ಯರ ಕೃತ್ಯ ಮುಂದೆ ಅವರ ಸರ್ಕಾರ ಸಿಂಗಲ್ ಡಿಜಿಟ್ ಕೂಡಾ ಗೆಲ್ಲುವುದು ಅಸಾಧ್ಯ ಎಂದರು.

ಪಂ.ಸ.ಮುಖಂಡರು ಎಂ.ಶಿವಣ್ಣ, ಪಂ.ಸ.ಮಹಿಳಾ ವಿಭಾಗದ ಜಿಲ್ಲಾ ಕಾರ್ಯದರ್ಶಿ ವೀಣಾ ವಿವೇಕನಂದಗೌಡ, ಭರಮನಗೌಡ, ಚಿರಿಬಿ ಮಂಜುನಾಥ, ಚಪ್ಪರದಹಳ್ಳಿ ಕೆ. ಕೊಟ್ರೇಶ್, ಹಾರಕನಾಳು ರಾಜಣ್ಣ ಇತರರು ಮಾತನಾಡಿದರು. ಇದಕ್ಕು ಮುನ್ನ ಪ್ರತಿಭಟ ನೆಯು ಹರಪನಹಳ್ಳಿ ರಸ್ತೆ ವೀರರಾಣಿ ಕಿತ್ತೂರು ಚೆನ್ನ ಮ್ಮಾಜಿ ವೃತ್ತದಿಂದ ಪ್ರಾರಂಭಗೊಂಡು, ಉಜ್ಜಿನಿ ಸರ್ಕಲ್ ಯಿಂದಸಾಗಿ ಶ್ರೀ ಗುರು ಕೊಟ್ಟೂರೇಶ್ವರ ದೇವಸ್ಥಾನ ಮುಂಭಾಗದಿಂದ ಗಾಂಧಿ ಸರ್ಕಲ್ ಮೂಲಕ ಬಸ್ ನಿಲ್ದಾಣದಲ್ಲಿ ಮಾನವ ಸರಪಳಿ ನಡೆಸಿ ಸರ್ಕಾರದ ವಿರುದ್ದ ಹಾಗೂ ಲಾಠಿ ಚಾರ್ಜ್ ಖಂಡಿಸಿ, 2ಎ ಮೀಸಲಾತಿ ಕೊಡುವಂತೆ ಘೋಷಣೆ ಕೂಗಿ, ದಾರಿಯುದ್ದಕ್ಕೂ ಹರ ಹರ ಮಹಾ ದೇವ, ಜೈ ಪಂಚಮಸಾಲಿ, ಜೈ ಜೈ ಪಂಚಮಸಾಲಿ ಘೋಷಣೆ ಜ್ಞೇಂಕರಿಸಿತು.

ಪ್ರತಿಭಟನೆಯ ಪಂಚಮಸಾಲಿ ಸಮಾಜದ ಮುಖಂಡರು ತಹಶಿಲ್ದಾರ ಅಮರೇಶ ಜಿ.ಕೆ ಅವರಿಗೆ ಮನವಿ ಪತ್ರ ನೀಡಿದರು, ಮನವಿ ಪತ್ರ ಸ್ವೀಕರಿಸಿ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ತಲುಪಿಸುವುದಾಗಿ ಹೇಳಿದರು.

ಸಮಾಜದ ಮಹಿಳೆಯರು ಡಿ.ಉಮಾದೇವಿ, ಮುಖಂಡ ರಾದ ಚಿರಿಬಿ ಪ್ರಕಾಶ, ಈಶ್ವರಪ್ಪ ತುರುಕಾಣಿ, ಚಪ್ಪರದಹಳ್ಳಿ ಕೊಟ್ರಪ್ಪ, ಮಲ್ಲಿಕಾರ್ಜುನ್, ಬಿ.ಪಂಪಾಪತಿ, ಕೋನಾಪುರ ಬಸವರಾಜ್, ಎನ್. ಬಸವರಾಜ್, ಡಿ.ಕರಿಯಪ್ಪ, ಅಶೋಕ ಇಂಜಿನಿಯರ್, ಕೆ.ಶಿವಕುಮಾರ ಗೌಡ, ಶಿವ ಪ್ರಕಾಶ್, ನಾಗರಾಜಗೌಡ, ಚಿರಿಬಿ ಮೂಗಪ್ಪ, ಎಸ್.ಗುರುಮೂರ್ತಿ, ಎಂ. ಕೊಟ್ರೇಶ್ ಸೇರಿದಂತೆ ಪ್ರತಿ ಭಟನೆಯಲ್ಲಿ ತಾಲೂಕಿನಾದ್ಯಂತ ಸುಮಾರು 500 ಕ್ಕೂ ಹೆಚ್ಚು ಜನರು ಪಾಲ್ಗೊಂಡು ಶಾಂತಿಯುತವಾಗಿ ಪ್ರತಿ ಭಟನೆಯನ್ನು ಯಶಸ್ವಿಗೊಳಿಸಿದರು. ಸಿಪಿಐ ವೆಂಕಟಸ್ವಾಮಿ ಹಾಗೂ ಪಿಎಸ್ಐ ಗೀತಾಂಜಲಿ ಶಿಂಧೆ ಸೂಕ್ತ ಬಂದೋಬಸ್ತ್ ಕಲ್ಪಿಸಿದ್ದರು.

# ಪಂಚಮಸಾಲಿ ಜಗದ್ಗುರಗಳಲ್ಲಿ ಸಿಎಂ ಸಿದ್ದರಾಮಯ್ಯ ಕ್ಷಮೆ ಕೋರಲಿ : ಸಮಾಜ ಆಗ್ರಹ

■ ಹಂಪಿ ಟೈಮ್ಸ್ ಕಂಪ್ಲಿ

ಬೆಳಗಾವಿ ಸುವರ್ಣಸೌಧದ ಮುಂದೆ ನಡೆದಿದ್ದ ಪಂಚಮಸಾಲಿ ಸಮುದಾಯದ ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ಖಂಡಿಸಿ, ಸಿಎಂ ಸಿದ್ಧರಾಮಯ್ಯ, ಎಡಿಜಿಪಿ ಪೊಲೀಸ್ ಅಧಿಕಾರಿ ಆರ್.ಹಿತೇಂದ್ರರನ್ನು ಅಧಿಕಾರದಿಂದ ವಜಾಗೊಳಿಸುವಂತೆ ಆಗ್ರಹಿಸಿ, ಇಲ್ಲಿನ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ತಾಲೂಕು ಘಟಕ ಪದಾಧಿಕಾರಿಗಳು ಗುರುವಾರ ತಹಸೀಲ್ದಾರ್ ಎಸ್.ಶಿವರಾಜಗೆ ಮನವಿ ಸಲ್ಲಿಸಿದರು.

ತಾಲೂಕು ಅಧ್ಯಕ್ಷ ಎಸ್.ಚಂದ್ರಶೇಖರಗೌಡ ಮಾತನಾಡಿ, ಲಿಂಗಾಯತರ ಹೋರಾಟ ಹತ್ತಿಕ್ಕುವ ದುರುದ್ದೇಶದಿಂದ ಲಾಠಿಚಾರ್ಜ್ ಮೂಲಕ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಸಿಎಂ ಸಿದ್ಧರಾಮಯ್ಯ ಲಿಂಗಾಯತ ವಿರೋಧಿಯಾಗಿದ್ದಾರೆ. ಎಡಿಜಿಪಿ ಸ್ವತಹ ಲಾಠಿ ಹಿಡಿದು ಹೋರಾಟಗಾರರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ರಾಜ್ಯಪಾಲರು ಮಧ್ಯಪ್ರವೇಶಿಸಿ ಇಬ್ಬರನ್ನು ಕೂಡಲೇ ಅಧಿಕಾರದಿಂದ ವಜಾಗೊಳಿಸಬೇಕು. ಪಂಚಮಸಾಲಿ ಶ್ರೀಬಸವಜಯ ಮೃತ್ಯುಂಜಯಸ್ವಾಮೀಜಿ ಯವರಲ್ಲಿ ಸಿಎಂ ಕ್ಷಮೆ ಕೋರಬೇಕು. ಹೋರಾಟಗಾರರ ಮೇಲೆ ಹಾಕಿರುವ ಪ್ರಕರಣ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.



ಇದಕ್ಕು ಮುನ್ನಾ ಅತಿಥಿಗೃಹದಿಂದ ಪ್ರತಿಭಟನೆ ಮೆರವಣಿಗೆ ಸಾಗಿ ಅಂಬೇಡ್ಕರ್ ವೃತ್ತದಲ್ಲಿ ಸಮಾವೇಶ ಗೊಂಡು ಮನವಿ ಸಲ್ಲಿಸುವಲ್ಲಿ ಸಂಘದ ಪದಾಧಿಕಾರಿ ಗಳಾದ ಜಿ.ಜಿ.ಆನಂದಮೂರ್ತಿ, ಅಳ್ಳಳ್ಳಿ ವೀರೇಶ, ಬಿ.ವಿ.ಗೌಡ, ಬಳೆ ಮಲ್ಲಿಕಾರ್ಜುನ, ಕೆ.ರೇಣುಕಗೌಡ, ಎಚ್.ಟಿ. ರಾಜಶೇಖರಗೌಡ, ಸಿ.ನಾಗರಾಜಗೌಡ ಶರಣಗೌಡ, ಓಂಕಾರಗೌಡ, ಜಿ.ಅಮರೇಗೌಡ, ಬೂದಾಳ್ ರವಿ, ಕೆ.ಬಸವರಾಜ, ಕೆ.ಪ್ರಶಾಂತ, ಕೋರಿ ಚನ್ನಬಸವ, ಬಸವನ ಗೌಡ, ಎಂ.ವೀರೇಶ, ಎ.ಪ್ರಕಾಶ, ಕೆ.ಕಂತೇಗೌಡ ಕೆ.ಶಶಿಧರ ಇತರರಿದ್ದರು.

## ಕವಿ ಮನಸು

### ನೆಲ್ಬೆಳಗು

ಮುಂಜಾನೆಯ ಸೂರ್ಯನ ನೆಲ್ಬೆಳಗು
ಆಗಸಕೆ ತಂದಿದೆ ಸೊಬಗು
ತರುಲತೆಗಳ ಸುಂದರ ನಗು
ಕಂಡೊಡನೆ ಆಗುವುದು ಬೆರಗು

ನಲ್ಬೆಳಗಿನ ಹಕ್ಕಿಗಳ ಕಲರವ
ಮನಕೆ ತರುವುದು ಪುಳಕವ
ತಂದಿದೆ ಮನೋಹರ ನೋಟವ
ವರ್ಣಿಸಲಸದಳ ಆ ಸಂತೋಷವ

ಉದಯ ರವಿ ಹೊಂಬಣ್ಣ
ತೆರೆಯುವುದು ಮನಸ್ಸಿನ ಕಣ್ಣ
ಚಿಗುರಿಸುತ ಎಲೆ ಕಾಯಿ ಹಣ್ಣ
ಪ್ರಕೃತಿಯ ಮುಂದೆ ನಾವೆಲ್ಲಾ ಸಣ್ಣ

– ಚೇತನ ಭಾರ್ಗವ ಬೆಂಗಳೂರು

### ಬಂಧವ ಬಯಸಿದೆ

ಗಗನದ ಕಪ್ಪನೆ ಮುಗಿಲನು ಸೆಳೆದೆಯ
ಬಿಗಿದೆಯ ಶಿರದಿ ಹೆರಳಾಗಿ
ಮಿಂಚುವ ತಾರೆಯ ಹೊಂಚುತ ಎಗರಿಸಿ
ಸಂಚಲಿ ಇರಿಸಿ ಕಣ್ಣಾಗಿ
ಚಂದಿರ ಕುಳಿತನೆ ಚಂದದ ವದನಕೆ
ಸುಂದರಿ ಹೇಳು ಮುಚ್ಚಿಡದೆ
ಕಪ್ಪಿನ ಕಣ್ಣಿಗೆ ಒಪ್ಪುವ ಹುಬ್ಬಿದೆ
ತಪ್ಪಿಸಿ ತಂದ ಮಳೆಬಿಲ್ಲು
ಕೆನ್ನೆಗೆ ಕೆಂಪಿನ ಬಣ್ಣವ ಬಳಿದೆಯ
ಹೊನ್ನಿನ ಓಲೆ ಕರ್ಣದಲಿ
ಸಂಪಿಗೆ ನಾಸಿಕ ಇಂಪಲಿ ಕೋಗಿಲೆ
ಕಂಪಿನ ಸುಮವು ಶಿರದಲ್ಲಿ
ಕಿರುನಗು ಅಧರದಿ ಇರಲದು ಸತತವು
ತರುಣಿಯ ಮೊಗಕೆ ಸೌಂದರ್ಯ
ಅಂದದ ಲಲನೆಯ ಬಂಧವ ಬಯಸಿದೆ
ಮುಂದಿನ ಬದುಕು ಹಸನಾಗೆ॥

ಪೆರ್ಮುಖ ಸುಬ್ರಹ್ಮಣ್ಯ ಭಟ್

### ಜಿಲ್ಲಾ ಆಸ್ಪತ್ರೆಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಭೇಟಿ, ಪರಿಶೀಲನೆ

# 2 ರಿಂದ 5 ಲಕ್ಷ ರೂ.ಗೆ ಪರಿಹಾರ ಹೆಚ್ಚಳ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಸಂಭವಿಸಿದ ಐವರು ಬಾಣಂತಿಯರ ಸಾವು ಪ್ರಕರಣ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ.ನಾಗಲಕ್ಷ್ಮೀ ಚೌದರಿ ಅವರು, ಗುರುವಾರ ಬಳ್ಳಾರಿ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಿಲ್ಲಾ ಆಸ್ಪತ್ರೆಯ ಹೆರಿಗೆ ವಿಭಾಗ, ಹೆರಿಗೆ ಕೋಣೆಗಳ ಸಮುಚ್ಚಯ, ಶಸ್ತ್ರಚಿಕಿತ್ಸೆ ಕೊಠಡಿ, ಬಾಣಂತಿಯರಿಗೆ ಮೂಲ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ, ಬಿಸಿ ನೀರಿನ ವ್ಯವಸ್ಥೆ ಮತ್ತು ಆರೈಕೆ ಕ್ರಮಗಳ ಕುರಿತು ಚರ್ಚೆ ನಡೆಸಿ, ಮಾಹಿತಿ ಪಡೆದುಕೊಂಡರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಈ ಹಿಂದೆ ಜಿಲ್ಲಾ ಆಸ್ಪತ್ರೆಯಲ್ಲಿ ಈ ತರಹದ ಘಟನೆ ಸಂಭವಿಸಲಿರಲಿಲ್ಲ, ಬಾಣಂತಿಯರ ಸಾವಿಗೆ ಐವಿ ರಿಂಗರ್ ದ್ರಾವಣ ಕೂಡ ಕಾರಣವಾಗಿರಬಹುದು ಎಂಬ ಶಂಕೆ ವ್ಯಕ್ತವಾಗಿರುವ ಹಿನ್ನಲೆಯಲ್ಲಿ ಆಗ ಸರಬರಾಜು ಆದ ಎಲ್ಲಾ ಐವಿ ರಿಂಗರ್ ಲ್ಯಾಕ್ಟೇಟ್ ದ್ರಾವಣ ಬ್ಯಾಚ್‌ಗಳನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಬಳಿಕ ಪಾಸಿಟಿವ್ ವರದಿ ಬಂದಿದೆ. ಈಗಾಗಲೇ ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್ ಅವರು, ಐವಿ ದ್ರಾವಣ ಔಷಧ ಸರಬರಾಜು ಸ್ಥಗಿತಗೊಳಿಸಿದ್ದಾರೆ ಎಂದು ತಿಳಿಸಿದರು.



ಸರ್ಕಾರವು ಮೃತ ಹೊಂದಿದ ಬಾಣಂತಿಯರಿಗೆ ಘೋಷಿಸಿದ ಪರಿಹಾರ ದಲ್ಲಿ 2 ಲಕ್ಷದಿಂದ 5 ಲಕ್ಷದವರೆಗೆ ಹೆಚ್ಚಿಸಲಾಗಿದೆ. ಮಕ್ಕಳ ಬೆಳವಣಿಗೆಗೆ ಹಾಗೂ ಅವರ ವಿದ್ಯಾಭ್ಯಾಸ ಸೇರಿದಂತೆ ಸಂಪೂರ್ಣ ಜವಾಬ್ದಾರಿ ಸರ್ಕಾರ ವಹಿಸಬೇಕು. ಈ ಕುರಿತು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದರು.

ಜನಸಾಮಾನ್ಯರ ಆರೋಗ್ಯದ ಕಾಳಜಿಗೆ ಹೆಚ್ಚಿನ ಮುತುವರ್ಜಿ ವಹಿಸಬೇಕು. ಗುಣಮಟ್ಟದ ಔಷಧಿ ಸರಬರಾಜು ಮಾಡಬೇಕು. ಈ ಕುರಿತು ಸರ್ಕಾರದ ಗಮನ ಸೆಳೆಯಲಾಗುವುದು ಎಂದರು.

ಜಿಲ್ಲಾ ಆಸ್ಪತ್ರೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಶಸ್ತ್ರಚಿಕಿತ್ಸಾ ಕೇಂದ್ರಗಳಲ್ಲಿ ಶುಚಿತ್ವ ಕಾಯ್ದುಕೊಳ್ಳಬೇಕು ಎಂದು ವೈದ್ಯಾಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಎನ್.ಬಸರೆಡ್ಡಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಬಿಮ್ಸ್ ನಿರ್ದೇಶಕ ಡಾ. ಗಂಗಾಧರ ಗೌಡ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ, ಬಳ್ಳಾರಿ ತಾಲ್ಲೂಕು ತಹಶೀಲ್ದಾರ ಗುರುರಾಜ ಸೇರಿದಂತೆ ಜಿಲ್ಲಾಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳು, ಶುಶೂಶ್ರಕರು ಹಾಗೂ ಇತರರು ಹಾಜರಿದ್ದರು.




# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೆ ಶಿಲ್ಪಿ


ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

6. ಕ್ರಿಯಾ ಗುಂಪುಗಳು ಎಂದರೇನು? ಈಥೇನ್‌ನ ಒಂದು ಹೈಡ್ರೋಜನ್ ಪರಮಾಣುವನ್ನು -CHO ಗುಂಪಿನಿಂದ ಪಲ್ಲಟಗೊಳಿಸಿದಾಗ ದೊರೆಯುವ ಸಂಯುಕ್ತದ ರಚನಾ ಸೂತ್ರವನ್ನು ಬರೆಯಿರಿ.

ಉತ್ತರ: ಅಣುಗಳ ವಿಶಿಷ್ಟ ಗುಣಗಳಿಗೆ ಕಾರಣವಾದ ನಿರ್ದಿಷ್ಟ ಪರಮಾಣು ಗುಂಪುಗಳಿಗೆ ಕ್ರಿಯಾ ಗುಂಪುಗಳು ಎನ್ನುತ್ತಾರೆ.

ಈಥೇನ್‌ನ ಒಂದು ಹೈಡ್ರೋಜನ್ ಪರಮಾಣುವನ್ನು -CHO ಗುಂಪಿನಿಂದ ಪಲ್ಲಟಗೊಳಿಸಿದಾಗ ದೊರೆಯುವ ಸಂಯುಕ್ತದ ಪ್ರೋಪೆನ್ಯಾಲ್ ($CH_3CH_2CHO$)

ರಚನಾಸೂತ್ರ :



7. ಮಾರ್ಜಕಗಳು ಸಾಬೂನುಗಳಿಗಿಂತ ಉತ್ತಮ ಸ್ವಚ್ಛಕಾರಿ. ಈ ಹೇಳಿಕೆಯನ್ನು ಸಮರ್ಥಿಸಿ.

ಉತ್ತರ: ಮಾರ್ಜಕಗಳು ಮೆದು ಹಾಗೂ ಗಡಸು ನೀರು ಎರಡರಲ್ಲಿಯೂ ಪರಿಣಾಮಕಾರಿಯಾಗಿ ಸ್ವಚ್ಛಗೊಳಿಸುತ್ತವೆ.

8. ಅನುರೂಪ ಶ್ರೇಣಿಯ ಮೊದಲ ಸದಸ್ಯನ ಅಣುಸೂತ್ರವು $C_2H_2$ ಆದರೆ, ಈ ಸರಣಿಯ ಮುಂದಿನ ಎರಡು ಸದಸ್ಯರ ಅಣುಸೂತ್ರ ಮತ್ತು ಹೆಸರುಗಳನ್ನು ಬರೆಯಿರಿ. JUNE-2024

ಉತ್ತರ: • ಅಣುಸೂತ್ರ – $C_3H_4$ ಪ್ರೋಪೈನ್

• ಅಣುಸೂತ್ರ – $C_4H_6$ ಬ್ಯೂಟೈನ್

9. ಸಸ್ಯಜನ್ಯ ಎಣ್ಣೆಗಳನ್ನು ಹೈಡ್ರೋಜನೀಕರಣಕ್ಕೆ ಒಳಪಡಿಸುವರು ಏಕೆ ?

ಉತ್ತರ: • ಸಸ್ಯಜನ್ಯ ಎಣ್ಣೆಗಳು ಸಾಮಾನ್ಯವಾಗಿ ಉದ್ದನೆಯ ಅಪರ್ಯಾಪ್ತ ಕಾರ್ಬನ್ ಸರಪಳಿ ಹೊಂದಿರುತ್ತವೆ.

• ಇವುಗಳು ಆರೋಗ್ಯಕ್ಕೆ ಹಾನಿಕರ

• ಆದ್ದರಿಂದ ಇವುಗಳನ್ನು ಹೈಡ್ರೋಜನೀಕರಣಕ್ಕೆ ಒಳಪಡಿಸಿ ಅಪರ್ಯಾಪ್ತ ಕೊಬ್ಬಿನ ಆಮ್ಲಗಳಾಗಿ ಪರಿವರ್ತಿಸಲಾಗುತ್ತದೆ.

10. ಎಸ್ಟರೀಕರಣ ಕ್ರಿಯೆ ಎಂದರೇನು ? ಈ ಕ್ರಿಯೆಯ ಒಂದು ಉಪಯೋಗ ತಿಳಿಸಿ

ಉತ್ತರ: • ಎಥನೋಯಿಕ್ ಆಮ್ಲವು ಆಮ್ಲೀಯ ಕ್ರಿಯಾವರ್ಧಕಗಳ ಸಮ್ಮುಖದಲ್ಲಿ ಅಲ್ಕೋಹಾಲ್‌ಗಳೊಂದಿಗೆ ವರ್ತಿಸಿ ಎಸ್ಟರ್‌ಗಳನ್ನು ಉಂಟುಮಾಡುವ ಕ್ರಿಯೆಗೆ ಎಸ್ಟರೀಕರಣ ಎನ್ನುವರು.

• ಎಸ್ಟರ್‌ಗಳನ್ನು ಸುವಾಸಿಕಗಳು ಹಾಗೂ ಸ್ವಾದಕಾರಕಗಳ ತಯಾರಿಕೆಯಲ್ಲಿ ಬಳಸುತ್ತಾರೆ.

11. ಎಥೆನಾಲನ ಮೂರು ಉಪಯೋಗಗಳನ್ನು ತಿಳಿಸಿ.

ಉತ್ತರ: • ಇದನ್ನು ಸಾವಯವ ದ್ರಾವಕವಾಗಿ ಬಳಸುತ್ತಾರೆ.

• ಇದು ಮದ್ಯಪಾನಗಳಲ್ಲಿನ ಸಕ್ರೀಯ ಘಟಕವಾಗಿದೆ.

• ಮದ್ಯಸಾರವಾಗಿ ಇದನ್ನು ಅನೇಕ ಕೈಗಾರಿಕೆಗಳಲ್ಲಿ ಬಳಸುತ್ತಾರೆ.


13. ಉಂಗುರ ರಚನೆ ಹೊಂದಿರುವ ಪರ್ಯಾಪ್ತ ಮತ್ತು ಅಪರ್ಯಾಪ್ತ ಹೈಡ್ರೋಕಾರ್ಬನ್ ಗಳಿಗೆ ಉದಾಹರಣೆ ನೀಡಿ. ಅವುಗಳ ಅಣುಸೂತ್ರ ಮತ್ತು ರಚನಾ ಸೂತ್ರ ಬರೆಯಿರಿ

ಉತ್ತರ: ಪರ್ಯಾಪ್ತ ಹೈಡ್ರೋಕಾರ್ಬನ್

ಉದಾ : ಸೈಕ್ಲೋ ಹೆಕ್ಸೇನ್

ಅಣುಸೂತ್ರ = $C_6H_{12}$

ರಚನಾ ಸೂತ್ರ =




ಅಪರ್ಯಾಪ್ತ ಹೈಡ್ರೋಕಾರ್ಬನ್

ಉದಾ : ಬೆಂಜೀನ್


ಅಣುಸೂತ್ರ = $C_6H_6$

ರಚನಾ ಸೂತ್ರ =




14. ಈ ಕೆಳಗಿನ ಸಂಯುಕ್ತಗಳಲ್ಲಿರುವ ಕ್ರಿಯಾ ಗುಂಪನ್ನು ಗುರುತಿಸಿ.

i)



ii)




ಉತ್ತರ: i) ಕೀಟೋನ್ ಕ್ರಿಯಾಗುಂಪು

ii) ಕಾರ್ಬಾಕ್ಸಿಲಿಕ್‌ಆಮ್ಲ ಕ್ರಿಯಾಗುಂಪು

15. ಕ್ರಿಯಾಗುಂಪು -OH ಇರುವ ಕಾರ್ಬನ್ ಸಂಯುಕ್ತಗಳ ಶ್ರೇಣಿಯ 4ನೇ ಸದಸ್ಯನನ್ನು ಹೆಸರಿಸಿ ಅದರ ರಚನಾಸೂತ್ರ ಬರೆಯಿರಿ.

ಉತ್ತರ: ಸಂಯುಕ್ತದ ಹೆಸರು : ಬ್ಯುಟೆನಾಲ್

ರಚನಾಸೂತ್ರ :




16. ಮೂರು ಕಾರ್ಬನ್ ಪರಮಾಣುಗಳಿರುವ ಕಾರ್ಬನ್ ಸಂಯುಕ್ತದ ಹೆಸರಿನ ಅಂತ್ಯ ಪ್ರತ್ಯಯಗಳು ಕ್ರಮವಾಗಿ 'ನ್ಯಾಲ್' ಮತ್ತು 'ನೋನ್' ಆಗಿದೆ. ಈ ಸಂಯುಕ್ತಗಳನ್ನು ಮತ್ತು ಅದರಲ್ಲಿರುವ ಕ್ರಿಯಾಗುಂಪನ್ನು ಹೆಸರಿಸಿ ಹಾಗು ಅದರ ರಚನಾ ವಿನ್ಯಾಸ ಬರೆಯಿರಿ.

ಉತ್ತರ: ಸಂಯುಕ್ತ : ಪ್ರೋಪೆನ್ಯಾಲ್ ( ಪ್ರೋಪೆನಾಲ್ಡಿಹೈಡ್)

ಕ್ರಿಯಾ ಗುಂಪು : ಅಲ್ಡಿಹೈಡ್


ರಚನಾ ವಿನ್ಯಾಸ :



ಸಂಯುಕ್ತ : ಪ್ರೊಪೇನೋನ್


ಕ್ರಿಯಾ ಗುಂಪು : ಕೀಟೋನ್

ರಚನಾ ವಿನ್ಯಾಸ :



17. ಈ ಕೆಳಗಿನವುಗಳ ಇಲೆಕ್ಟ್ರಾನ್ ಚುಕ್ಕಿ ರಚನೆಗಳನ್ನು ಬರೆಯಿರಿ

ಉತ್ತರ:




18. ಗಡಸು ನೀರಿನಲ್ಲಿ ಬಟ್ಟೆಗಳನ್ನು ಸ್ವಚ್ಛಗೊಳಿಸಲು ಮಾರ್ಜಕಗಳನ್ನು ಬಳಸುವುದು ಹೆಚ್ಚು ಸೂಕ್ತ. ಏಕೆ ? JUNE-2023

ಉತ್ತರ: ಮಾರ್ಜಕಗಳು ಗಡಸು ನೀರಿನಲ್ಲಿ ಕ್ಯಾಲ್ಸಿಯಂ ಮತ್ತು ಮೆಗ್ನೀಷಿಯಂ ಅಯಾನುಗಳೊಂದಿಗೆ ವರ್ತಿಸಿ ಚರಟಅಥವಾ ಒತ್ತರವನ್ನು ಉಂಟುಮಾಡುವುದಿಲ್ಲ.

5. ಹೈಡೋಜನೀಕರಣ ಎಂದರೇನು? MARCH-2023

ಉತ್ತರ : ಅಪರ್ಯಾಪ್ತ ಹೈಡೋಕಾರ್ಬನ್‌ಗಳು ಪೆಲ್ಲೇಡಿಯಂ ಅಥವಾ ನಿಕ್ಕಲ್‌ನಂತಹ ಕ್ರಿಯಾವರ್ಧಕದ ಸಮ್ಮುಖದಲ್ಲಿ ಹೈಡೋಜನ್ ಅನ್ನು ಸೇರಿಸಿಕೊಂಡು ಪರ್ಯಾಪ್ತ ಹೈಡೋಕಾರ್ಬನ್‌ಗಳನ್ನು ಉಂಟುಮಾಡುವುದನ್ನು ಹೈಡೋಜನೀಕರಣ ಎನ್ನುತ್ತಾರೆ.

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**13–12–2024 – ಶುಕ್ರವಾರ**

| | |
|---|---|
| ತಿಥಿ | :ತ್ರಯೋದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಭರಣಿ/ಕೃತ್ತಿಕಾ |
| ಯೋಗ | : ಶಿವ |
| ಕರಣ | : ಕೌಳವ |
| ಸೂರ್ಯೋದಯ | : 07:00:41 |
| ಸೂರ್ಯಾಸ್ತ | : 17:41:57 |
| ರಾಹು ಕಾಲ | : 11:01–12:21 |
| ಯಮಘಂಡ ಕಾಲ | : 15:02–16:22 |
| ಗುಳಿಕ ಕಾಲ | : 08:21–09:41 |



## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 12–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.36 ಅಡಿ |
| ಒಳ ಹರಿವು | 4478 ಕ್ಯುಸೆಕ್ |
| ಹೊರ ಹರಿವು | 5971 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 91.682 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1591.19 ಅಡಿ |
| ಒಳ ಹರಿವು | 658 ಕ್ಯುಸೆಕ್ |
| ಹೊರ ಹರಿವು | 1924 ಕ್ಯುಸೆಕ್ |
| ಸಾಮರ್ಥ್ಯ | 12.055 ಟಿಎಂಸಿ |

## ಬೆಳೆವಿಮೆ ನೋಂದಣಿಗೆ ಆಹ್ವಾನ

**ನೋಂದಣಿ:** ಜೋಳ, ಮುಸುಕಿನ ಜೋಳ, ಸೂರ್ಯಕಾಂತಿ, ಕುಸುಮೆ, ಬೆಳೆಗಳಿಗೆ ಡಿ.16 ಕೊನೆಯ ದಿನ. ಕಡಲೆ ಬೆಳೆಗೆ ಡಿ.31 ಕೊನೆಯ ದಿನವಾಗಿದೆ. ಬೇಸಿಗೆ ಬೆಳೆಗಳಾದ ಭತ್ತ, ನೆಲಗಡಲೆ, ಸೂರ್ಯಕಾಂತಿ, ಈರುಳ್ಳಿ ಬೆಳೆಗಳಿಗೆ 2025ರ ಫೆ.28 ಕೊನೆಯ ದಿನವಾಗಿದೆ.

ಬೆಳೆಗಳ ವಿಮೆ ನೋಂದಣಿಗೆ ತಾಲ್ಲೂಕು, ಹೋಬಳಿ, ಗ್ರಾಮ ಪಂಚಾಯತಿಗಳಿಗೆ ನಿಗದಿಪಡಿಸಿದ್ದು, ನಿಗದಿತ ಘಟಕದಲ್ಲಿ ಬೆಳೆ ನೋಂದಣಿ ಮಾಡಲಾಗುವುದು. ಬೆಳೆ ವಿಮೆ ನೋಂದಣಿಗಾಗಿ ಹತ್ತಿರದ ಸಾಮಾನ್ಯ ಸೇವಾ ಕೇಂದ್ರ, ಗ್ರಾಮ ಓನ್ ಕೇಂದ್ರ, ರೈತರು ತಮ್ಮ ವ್ಯವಹಾರದ ಬ್ಯಾಂಕ್‌ಗಳಿಗೆ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಹಾಗೂ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿ.14ರಂದು ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಟೆನ್ನಿಸ್ ವಾಲಿಬಾಲ್ ಕ್ರೀಡಾಕೂಟ

**ಹಂಪಿ ಟೈಮ್ಸ್ ಕೊಪ್ಪಳ**

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಕೊಪ್ಪಳ ಜಿಲ್ಲೆ, ಬೇತಲ್ ಕ್ರಿಶ್ಚಿಯನ್ ಫೆಲೋಶಿಪ್ ಅಸೋಸಿಯೇಶನ್(ರಿ) ಗಂಗಾವತಿ ಹಾಗೂ ಬೇತಲ್ ಸ್ವತಂತ್ರ ಪದವಿ ಪೂರ್ವ ಕಾಲೇಜುಗಂಗಾವತಿಇವರಸಂಯುಕ್ತಾಶ್ರಯದಲ್ಲಿ




ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಟೆನ್ನಿಸ್ ವಾಲಿ ಬಾಲ್ ಕ್ರೀಡಾ ಕೂಟದ ಉದ್ಘಾಟನಾ ಸಮಾರಂಭವನ್ನು ಡಿಸೆಂಬರ್ 14ರಂದು ಬೆಳಿಗ್ಗೆ 10 ಗಂಟೆಗೆ ಗಂಗಾವತಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿ ಶಿವರಾಜ ಸಂಗಪ್ಪ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರಾದ ಎಸ್.ಮಧುಬಂಗಾರಪ್ಪ ಅವರು ಕ್ರೀಡಾಧ್ವಜಾರೋಹಣ ನೆರವೇರಿಸುವರು. ಕರ್ನಾಟಕ ವಿಧಾನಸಭೆ ವಿರೋದ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ್ ಅವರು ಕ್ರೀಡಾಜ್ಯೋತಿ ಬೆಳಗಿಸುವರು. ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರೆಡ್ಡಿ ಅವರು ಘನ ಉಪಸ್ಥಿತರಿರುವರು. ಗಂಗಾವತಿ ಶಾಸಕರಾದ ಜಿ.ಜನಾರ್ಧನ ರೆಡ್ಡಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

# ಹನುಮ ವ್ರತ ಭಕ್ತಿ ಪರಿವರ್ತನೆಗೆ ಮಾರ್ಗ

■ ಜಿ.ವಿ.ಸುಬ್ಬರಾವ್ ಮರಿಯಮ್ಮನಹಳ್ಳಿ





ಭಾರತೀಯ ಸಂಸ್ಕೃತಿಯಲ್ಲಿ ಆಚಾರ, ವೃತಗಳಿಗೆ ಇರುವ ಶಕ್ತಿಯಿಂದಲೇ ಸಂಸ್ಕಾರ, ಧಾರ್ಮಿಕಪ್ರಜ್ಞೆ ಸಾಧ್ಯ.ಅದರ ಮಹತ್ವದಿಂದಲೇ ವ್ಯಕ್ತಿಗಳಲ್ಲಿ ಮಹತ್ತರ ಬದಲಾವಣೆಯೂ ಸಾಧ್ಯ.ಆದ್ದರಿಂದಲೇ ಈಗೀಗ ವೃತಗಳಿಗೆ ಹಿಂದೂಸಮಾಜ ಒತ್ತುಕೊಟ್ಟು ಜಾಗೃತಿಯತ್ತಸಾಗಿದೆ. ಅಯ್ಯಪ್ಪಮಾಲೆ(ವ್ರತ) ಯೊಂದಿಗೆ ಈಗೀಗ ಹನುಮಮಾಲೆಯೂ ಆರಂಭ ಗೊಂಡಿದೆ. ಹನುಮಮಾಲೆಯತ್ತ ಯುವಕರು ವಾಲುತ್ತಿರುವುದು ಬದಲಾವಣೆಯ ಸಂಕೇತ.

ಹನುಮ ಮಾಲೆಯನ್ನು ಕಾರ್ತಿಕ ಮಾಸದಲ್ಲಿ ಧರಿಸಿ, ಮಾರ್ಗಶಿರ ಶುದ್ಧ ತ್ರಯೋದಶಿಯಂದು ಮಾಲೆ ವಿಸರ್ಜನೆ ಮಾಡುತ್ತಾರೆ. ಇದು ಹನುಮ ಜಯಂತಿ ಅಲ್ಲ, ಹನುಮದ್ ವ್ರತ. ಹನುಮದ್ ವ್ರತ ಅಂದ್ರೆ ಪಾಂಡವರು ವನವಾಸದಿಂದ ಹೊರಬರಲಿ ಎಂದು ಧರ್ಮರಾಯ, ಹನುಮಂತನಿಗೆ ವ್ರತ ಆಚರಣೆ ಮಾಡಿದ್ದರಂತೆ, ಹೀಗಾಗಿ ಹನುಮ ವ್ರತಕ್ಕೂ ಮಾಲೆಯ ಕುರಿತು ಪುರಾಣಗಳು ಹೇಳುತ್ತವೆ.

ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ತುಂಗಾಭದ್ರಾ ನದಿಯ ತಟದಲ್ಲಿ ನಿಂತಿರುವ ಕಿಷ್ಕಿಂದೆ ಪ್ರದೇಶದಲ್ಲಿರೋ ಆಂಜನೇಯನ ಜನ್ಮಭೂಮಿ ಈ ಅಂಜನಾದ್ರಿಬೆಟ್ಟದಲ್ಲಿ ಹನುಮನ ಜನನವಾಗಿರುವ ಕುರಿತು ಇತಿಹಾಸಜ್ಞರು ಹೇಳುತ್ತಾರೆ. ಸನಾತನ ಧರ್ಮದ ಪ್ರಕಾರ ಮನುಷ್ಯನು ಭಗವಂತನಲ್ಲಿ ಐಕ್ಯವಾಗಲು ಅನೇಕಯೋಗ ಮಾರ್ಗಗಳಿವೆ. ಆಂಜನೇಯನ ವ್ರತ ಮಾಡುವವರು ಭಕ್ತಿಯೋಗದ ಮೂಲಕ ದೈವ ಸ್ವರೂಪದ ಅನುಭವವನ್ನು ಪಡೆಯುತ್ತಾರೆ.

**ವ್ರತಾಚರಣೆ :** ಹನುಮ ಮಾಲಾಧಾರಣೆ ವೇಳೆ ಕೆಲವೊಂದು ನಿಯಮಗಳಿವೆ. ಆಂಜನೇಯನ ದೇವಸ್ಥಾನದಲ್ಲೇ ಮಾಲೆ ಧರಿಸಬೇಕು. ಮಾಲೆ ಧರಿಸಿದಾಗ ಪೂರ್ಣಗೊಳ್ಳುವವರೆಗೆ ಮಾಲೆಯನ್ನು ಯಾವುದೇ ಕಾರಣಕ್ಕೂ ತೆಗೆಯಬಾರದು. ಈ ಸಮಯದಲ್ಲಿ ಎಲ್ಲರಲ್ಲಿಯೂ ಹನುಮ, ಅಂಜನೇಯ, ಭಜರಂಗಿಯನ್ನು ಕಾಣಬೇಕು ಎಲ್ಲರನ್ನು ಸ್ವಾಮಿ ಎಂದು ಕರೆಯಬೇಕು. ಈ ಸಮಯದಲ್ಲಿ ಯಾವುದೇ ರೀತಿಯ ಸೌಂದರ್ಯ ವರ್ಧಕಗಳು ಅಥವಾ ಇತರ ಅಲಂಕಾರಗಳನ್ನು ಮಾಡುವಂತಿಲ್ಲ. ಭೌತಿಕ ಅಗತ್ಯತೆಗಳು ಮತ್ತು ಆಹಾರದ ವಿಷಯದಲ್ಲಿ ಅತ್ಯಂತ ಸರಳ ಜೀವನವನ್ನು ನಡೆಸಬೇಕು. ಹಾಗೆಯೇ ನಿಮ್ಮ ಉಗುರುಗಳನ್ನ ಅಥವಾ ಕೂದಲು ಕತ್ತರಿಸುವುದು ಕೂಡ ಮಾಡಬಾರದು. ತಾಮಸ ಗುಣಗಳಿಂದ ಮುಕ್ತರಾಗಿ, ಸಾತ್ವಿಕ ಆಹಾರ ಸೇವಿಸಬೇಕು. ಯಾವುದೇ ಅಂತ್ಯಕ್ರಿಯೆಯ ವಿಧಿಗಳನ್ನು ನಡೆಸಬಾರದು. ಹಾಗೆಯೇ ಅಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸ ಬಾರದು. ಇಷ್ಟು ಮಾತ್ರವಲ್ಲದೇ ಮಾಲೆ ಹಾಕಿದ ಬಳಿಕ ಹಗಲು ಹೊತ್ತಿನಲ್ಲಿ ಮಲಗಬಾರದು ಎಂದು ಸಹ ಹೇಳಲಾಗುತ್ತದೆ.

**ಆಚರಣೆ :** ಹನುಮನ ವ್ರತವನ್ನು 48, 21, 11, 9, 5, 3 ದಿನಗಳ ಕಾಲ ಆಚರಿಸುತ್ತಾರೆ. ಹನುಮಮಾಲೆ ಧರಿಸಿದ ವ್ರತಧಾರಿಗಳುಸೂರ್ಯೋದಯ,ಸೂರ್ಯಾಸ್ತರೊಳಗಾಗಿ ತಣ್ಣೀರ ಸ್ನಾನ ಮಾಡಬೇಕು. ವ್ರತ ಮುಗಿಯುವವರೆಗೆ ಚಪ್ಪಲಿ ಧರಿಸುವಂತಿಲ್ಲ. ಪ್ರತಿದಿನ ಹನಮಂತನ ಪೂಜೆಯೊಂದಿಗೆ ಹನುಮಾನ್ ಚಾಲೀಸಾ ಪಠಣ, ಭಜನೆಗಳನ್ನು ಮಾಡುವುದು. ಕಾಲಿಗೆ ಚಪ್ಪಲಿಯನ್ನು ಹಾಕುವಂತಿಲ್ಲ, ಬರಿಗಾಲಿನಲ್ಲಿಯೇ ನಡೆಯಬೇಕು, ಯಾವುದೇ ಕಾರಣಕ್ಕೂ ತಲೆಗೆ ಮತ್ತು ದೇಹಕ್ಕೆ ಎಣ್ಣೆಯನ್ನು ಹಚ್ಚಿಕೊಳ್ಳಬಾರದು. ಈ ಸಮಯದಲ್ಲಿ ಆಡಂಭರದ ಬದುಕಿನಿಂದ ಅತ್ಯಂತ ಸರಳ ಜೀವನಕ್ಕೆ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು.

**ಬಟ್ಟೆ :** ಭಕ್ತರು ಕಡ್ಡಾಯವಾಗಿ ಕೇಸರಿ ಬಟ್ಟೆ (ಅಂಗಿ,ಶಲ್ಯ,ಲುಂಗಿ)ಯನ್ನು ಮಾತ್ರ ಧರಿಸಿ ಹಣೆಗೆ ಕೇಸರಿ ಸಿಂಧೂರ ಹಚ್ಚಿಕೊಂಡಿರಬೇಕು. ಯಾವುದೇ ಕಾರಣಕ್ಕೂ ಟೀಶರ್ಟ್ ಧರಿಸುವಂತಿಲ್ಲ. ಭಕ್ತರು ಮಾಲೆ ಧರಿಸಿದ ಸಮಯದಲ್ಲಿ ದೇವರ ಭಜನೆ, ಪೂಜೆ, ದೇವರ ನಾಮ ಸ್ಮರಣೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ದೀಕ್ಷೆ ಪಡೆದವರು ನೆಲದ ಮೇಲೆ ಮಲಗಬೇಕು.

ಹನುಮಾನ್ ಮಾಲೆ ಧರಿಸಲು ಈ ಮೇಲೆ ಹೇಳಿರುವ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ಜೀವನದ ಅನೇಕ ಸಮಸ್ಯೆಗಳು ದೂರಾಗುತ್ತದೆ. ನಮ್ಮ ಜೀವನವನ್ನು ಅಭಿವೃದ್ಧಿಗೊಳಿಸುವಲ್ಲಿ ಸಹಕಾರಿಯಾಗುತ್ತದೆ.

**ಅಂಜನಾದ್ರಿ:** ಅಂಜನಾದ್ರಿಯಲ್ಲಿ ಅಂಜನಾದೇವಿ ಆಂಜನೇಯನಿಗೆ ಜನ್ಮನೀಡಿದ್ದರಿಂದ, ಬಳ್ಳಾರಿ, ಕೊಪ್ಪಳ, ವಿಜಯನಗರ ಹನುಮನ ನಾಡಾಗಿದೆ.ಹಿಂದೂಗಳ ಆರಾಧ್ಯದೈವ, ಮರ್ಯಾದಪುರುಷ ಶ್ರೀರಾಮಚಂದ್ರನ ಭಕ್ತ ಹನುಮನ ಮಾಲೆ ಧರಿಸಿದ ಹನುಮಭಕ್ತರು ನಾಡಿನಹಲವೆಡೆಯಿಂದ ಪಾದಯಾತ್ರೆ, ಬೈಕ್, ಬಸ್‌ಗಳ ಮೂಲಕ ಲಕ್ಷಾಂತರ ಹನುಮನ ಮಾಲೆಧಾರಿಗಳು ಅಂಜನಾದ್ರಿಯತ್ತ ಧಾವಿಸುತ್ತಾರೆ. ವ್ರತದ ಕೊನೆಯ ದಿನ ಪವಮಾನ ಹೋಮದೊಂದಿಗೆ ವ್ರತ ಸಂಪನ್ನಗೊಳ್ಳುತ್ತದೆ.

### ನದಿಗೆ ಬಟ್ಟೆಗಳನ್ನು ಬಿಡಬೇಡಿ

ಹನುಮ ಮಾಲಾಧಾರಿಗಳು ವ್ರತದ ಕೊನೆಯದಿನ ಮಾಲೆವಿಸರ್ಜಿಸಿ,ಧರಿಸಿದ್ದ ಕೇಸರಿ ವಸ್ತ್ರಗಳನ್ನು ನದಿಯಲ್ಲೇ ಬಿಟ್ಟುಹೋಗದೆ, ಮರಳಿ ಒಯ್ಯಬೇಕು, ಮುಂದಿನ ವರ್ಷ ಅದೇ ಮಾಲೆ, ವಸ್ತ್ರಗಳನ್ನೇ ಧರಿಸಿ.ಯಾವದೇ ಕಾರಣಕ್ಕೂ ಮಾಲೇ, ಕೇಸರಿಬಟ್ಟೆಗಳನ್ನು ನದಿಗೆ ಹಾಕಬೇಡಿ. ಮಾಲೆಯನ್ನು ನಿಮ್ಮ ಮನೆಯ ದೇವರ ಕೋಣೆಯಲ್ಲಿಟ್ಟು ಪೂಜಿಸಿದರೆ, ಇದರಿಂದ ಮನೆಯಲ್ಲಿ ಧನಾತ್ಮಕ ಶಕ್ತಿ ಹೆಚ್ಚುತ್ತದೆ.

### ಡಿ.16 ರಂದು ಶ್ರೀ ಗುರು ಕೊಟ್ಟೂರೇಶ ಸ್ವಾಮಿ ಕಾರ್ತೀಕೋತ್ಸವ. । ಕೊಟ್ಟೂರು ಅನನ್ಯಭಕ್ತರ ನೆಲ, ಮಾಲಾಧಾರಣೆಗೆ ನಿಶ್ಚಿತ ಫಲ.

# ಸನ್ಮಾರ್ಗದ ವ್ರತ : ಶ್ರೀ ಗುರು ಮಾಲಾಧಾರಣೆ

ವರಗುರು, ಕೊಡುಗೈ ಅಧಿಪತಿ ಶ್ರೀ ಗುರು ಕೊಟ್ಟೂರೇಶ ಸ್ವಾಮಿ ಕಾರ್ತೀಕೋತ್ಸದ ಬೆಳ್ಳಿ ರಥದಲ್ಲಿ ವಿರಾಜಮಾನರಾಗಿ ಡಿ.16 ರಂದು ಲಕ್ಷಾಂತರ ಭಕ್ತರಿಗೆ ತಮ್ಮ ದಿವ್ಯ ದರುಶನ ಭಾಗ್ಯ ನೀಡಲಿದ್ದಾರೆ. ಅಜ್ಞಾನದಿಂದ ಸುಜ್ಞಾನದ ಕಡೆಗೆ ಕರೆದೊಯ್ಯುವ ಕೊಟ್ಟೂರು ಕಾರ್ತೀಕೋತ್ಸವ ಈ ನಾಡಿನ ಧಾರ್ಮಿಕ ಪರಂಪರೆಯ ಹಿರಿಮೆಯಾಗಿದೆ. ಅಂತಂಗ ಮತ್ತು ಬಹಿರಂಗ ಶುದ್ದಿಯ ಮೂಲಕ ಶ್ರೀ ಗುರು ಕೊಟ್ಟೂರೇಶ ಸ್ವಾಮಿ ಕೃಪೆಗೆ ಪಾತ್ರರಾಗಲು ಕಂಡುಕೊಂಡ ಅನನ್ಯ ಭಕ್ತಿ ಮಾರ್ಗವೇ ಶ್ರೀ ಗುರು ಮಾಲಾಧಾರಣೆ. 1997 ರಲ್ಲಿ ಶ್ರೀ ಕ್ಷೇತ್ರ ಕೊಟ್ಟೂರಿನಲ್ಲಿ ಪ್ರಥಮವಾಗಿ ಶ್ರೀ ಷ. ಬ್ರ .ಯೋಗಿ ರಾಜೇಂದ್ರ ಶಿವಾಚಾರ್ಯರು, ಕಟ್ಟೆಮನಿ ಹಿರೇಮಠ ಮತ್ತು ಷ. ಬ್ರ. ಸಿದ್ದಲಿಂಗ ಶಿವಾಚಾರ್ಯರು, ಚಾನು ಕೋಟಿಮಠ ಇವರುಗಳ ಸಾನಿಧ್ಯದಲ್ಲಿ ಕೆಲವೇ ಭಕ್ತರ ಸಹಕಾರದೊಂದಿಗೆ ಶ್ರೀ ಗುರು ಕೊಟ್ಟೂರೇಶ್ವರ ರುದ್ರಾಕ್ಷಿ ಮಾಲಾಧಾರಣ ವ್ರತಾಚರಣೆ ಪ್ರಾರಂಭವಾಯಿತು.

**"ಅಯ್ಯಾ ನನಗೆ ರುದ್ರಾಕ್ಷಿಯೇ ಸರ್ವಪಾವನವೂ**
**ಅಯ್ಯಾ ನನಗೆ ರುದ್ರಾಕ್ಷಿಯೇ ಸರ್ವ ಕಾರಣವೂ**
**ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವ ಸಾಧನವು**
**ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವ ಸಿದ್ದಿ**
**ಅಯ್ಯಾ ನನಗೆ ರುದ್ರಾಕ್ಷಿಯೇ ಸರ್ವ ಪಾಪ ಕ್ಷಯವು**
**ಅಯ್ಯಾ ನನಗೆ ಪಂಚ ವಕ್ತಂಗಳೇ ಪಂಚಮುಖದ ರುದ್ರಾಕ್ಷಿಗಳಾದವಾಗಿ**
**ಅಯ್ಯಾ ಕೂಡಲಸಂಗಮದೇವಯ್ಯ**
ಎನ್ನ ಮುಕ್ತಿ ಪಥಕ್ಕೆ ಶ್ರೀ ಮಹಾರುದ್ರಾಕ್ಷಿ ಸಾಧನವಯ್ಯ".


ಇಡೀ ವರ್ಷವೆಲ್ಲ ಬಿಡುವಿಲ್ಲದ ಜೀವನದಲ್ಲಿ ಬದುಕುವ ನಾವುಗಳು ವರ್ಷದ ಕಾರ್ತಿಕ ಮಾಸದ ಒಂದು ತಿಂಗಳು ಶ್ರೀ ಗುರುವಿನ ವ್ರತವನ್ನು ಕೈಗೊಂಡು ಶಾಂತಿಯಿಂದ ಆಚರಿಸಿದರೇ ಇಡೀ ವರ್ಷವೆಲ್ಲ ನೆಮ್ಮದಿಯಾಗಿ ಇರಬಹುದು. ಸ್ವ ಪ್ರೇರಣೆಯಿಂದ ಇಷ್ಟಲಿಂಗ ಪೂಜೆ ಕೈಗೊಂಡು ಶ್ರೀ ಗುರು ಕೊಟ್ಟೂರೇಶ್ವರನನ್ನು ಒಲಿಸಿ ಕೊಳ್ಳಬಹುದಾದ ವ್ರತವಾಗಿದೆ.



ಕೊಟ್ಟೂರೇಶ್ವರಿ ಬಸಾಪುರ.
ಶಿಕ್ಷಕಿ, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ವ್ರತದ ನಿಯಮಗಳು 108 ರುದ್ರಾಕ್ಷಿ ಮಾಲೆಯನ್ನು ಹಾಕಿಕೊಳ್ಳಬೇಕು. ಬಿಳಿ ಲುಂಗಿ ಬಿಳಿಯಂಗಿ ಮತ್ತು ಕೆಂಪು ವಸ್ತ್ರ ಧರಿಸಬೇಕು. ಧೂಮಪಾನ, ಮದ್ಯ ಪಾನ, ಗುಟ್ಕಾ, ಜೂಜು, ದುಶ್ಚಟ ಗಳಿಂದ ದೂರವಿರಬೇಕು. ಪಾದರಕ್ಷೆ ಧರಿಸುವಂತಿಲ್ಲ. ಬೆಳಗಿನ ಜಾವ ಸ್ನಾನ ಮಾಡಿ ಲಿಂಗ ಪೂಜೆ ಮಾಡಿಕೊಳ್ಳಬೇಕು. ಮನೆಯಲ್ಲಾದರೂ ಮಾಡಬಹುದು ಅಥವಾ ಸಾಮೂಹಿಕ ವಾಗಿಯಾದರೂ ಮಾಡಬಹುದು. ಮನೆಯಲ್ಲಿ ಸ್ತ್ರೀಯರು ಮಡಿಯಿಂದ ಮಾಡಿದ ಸಾತ್ವಿಕ ಆಹಾರ ತೆಗೆದುಕೊಳ್ಳಬಹುದು. ಮಧ್ಯಾಹ್ನ ಊಟವಿಲ್ಲ. ಹಸಿವಾದರೆ ಹಣ್ಣುಗಳನ್ನು ತಿನ್ನಬಹುದು. ಮತ್ತೊಮ್ಮೆ ಸಂಜೆಯ ಸ್ನಾನದ ನಂತರ ಲಿಂಗಪೂಜೆ ಮಾಡಿ ಪ್ರಸಾದ ಸ್ವೀಕರಿಸಬೇಕು. ಹೀಗೆ ಕಡ್ಡಾಯವಾಗಿ ವ್ರತ ಮುಗಿಯುವವರೆಗೂ ಮಾಡಬೇಕು. ಇಷ್ಟೇ ದಿನ ಮಾಡಬೇಕೆಂಬ ಯಾವ ನಿಯಮಗಳು ಇಲ್ಲ. ಪಾಡ್ಯದಿಂದ ಕಾರ್ತಿಕದ ತನಕ, 21 ದಿನವಾದರೂ, 11 ದಿನವಾದರೂ, 9 ದಿನವಾದರೂ, ಐದು ದಿನವಾದರೂ, ಮೂರು ದಿನವಾದರೂ ಅಥವಾ ಒಂದು ದಿನವಾದರೂ ಸಹ ಮಾಡಬಹುದು. ದೀಪಾವಳಿ ಪಾಡ್ಯದಿಂದ ಕಾರ್ತಿಕ ಮಾಸದ ನಂತರ ಮಾರ್ಗಶಿರ ಮಾಸದ ಹುಣ್ಣಿಮೆಯ ನಂತರ ಬರುವ ಸೋಮವಾರದಂದು ಕೊಟ್ಟೂರೇಶ್ವರನ ಕಾರ್ತಿಕ ಜರುಗುತ್ತದೆ. ಕಾರ್ತಿಕದ ನಂತರ ಬೆಳಗ್ಗೆ ಮಂಗಳವಾರ ಸಾಮೂಹಿಕವಾಗಿ ಗುರುವಿನ ಮಾಲೆಯನ್ನು ತೆಗೆದ ನಂತರ ಪ್ರಸಾದದ ವ್ಯವಸ್ಥೆ ಇರುತ್ತದೆ. ಕೊಡುಗೈ ದಾನಿ ಕೊಟ್ಟೂರೇಶ್ವರರು ಭಕ್ತರ ಇಷ್ಟಾರ್ಥಗಳನ್ನು ಪೂರೈಸುವ ಮಹಾ ಮಹಿಮರು. ಸಾಮೂಹಿಕವಾಗಿ ಪೂಜೆ ಮಾಡುವವರು ಪೂಜೆಯ ನಂತರ ಭಜನೆ ಹಾಡು ಸ್ವಾಮಿಯ ಶತನಾಮಾವಳಿಗಳನ್ನು ಹೇಳ ಬಹುದು.



"ಜಗದಗಲ ಮುಗಿಲಗಲ ಮಿಗೆಯಗಲ
ನಿಮ್ಮಗಲ ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಂಡದಿಂದತ್ತತ್ತ ನಿಮ್ಮ ಶ್ರೀಮುಕುಟ
ಅಗಮ್ಯ ಅಗೋಚರ ಅಪ್ರತಿಮ ಲಿಂಗವೇ
ಕೂಡಲ ಸಂಗಮದೇವಯ್ಯ ಎನ್ನ ಕರಸ್ಥಳಕ್ಕೆ
ಬಂದು ಚುಳುಕಾದಿರಯ್ಯ"

ಎನ್ನುವ ಬಸವಣ್ಣನವರ ವಚನದಂತೆ ಜಗದಗಲ ಮುಗಿಲಗಲ ಅಪ್ರತಿಮ ಲಿಂಗವನ್ನು ಜಾತಿ ಭೇದವಿಲ್ಲದೆ ಯಾವುದೇ ಜಾತಿಯವರಾದರು ಧರಿಸಿ ಸದ್ಗುರುವಿನ ಕರುಣೆಗೆ ಪಾತ್ರರಾಗಬಹುದು. ಚಳಿಗಾಲ ವಾದ್ದರಿಂದ ಸ್ನಾನ ಪೂಜೆ ಕಷ್ಟವೆನಿಸಿದರು ಸಹ ಲಕ್ಷಾಂತರ ಭಕ್ತರು ನಿಷ್ಠೆಯಿಂದ ಆಚರಿಸಿ ಗುರು ಕೃಪೆಗೆ ಪಾತ್ರರಾಗಿದ್ದಾರೆ. ಕೊಟ್ಟೂರಿನ ಸುತ್ತಮುತ್ತಲ ಹಳ್ಳಿಗಳಿಂದ, ನಗರಗಳಿಂದ ಸಾವಿರಾರು ಜನ ಕಾರ್ತಿಕ ಮಾಸದಲ್ಲಿ ಪ್ರತಿನಿತ್ಯ ಕೊಟ್ಟೂರೇಶ್ವರರ ದರ್ಶನಕ್ಕೆ ಬರುತ್ತಾರೆ. ಮಾಲೆ ಧರಿಸಿದವರು ಸರ್ವರನ್ನು ಗುರು ಸಮಾನರಾಗಿ ಕಂಡು ಪ್ರತಿಯೊಬ್ಬರನ್ನು ಗುರುವೆಂದು ಸಂಬೋಧಿಸಬೇಕು. ಪ್ರತಿ ಸೋಮವಾರ ಮತ್ತು ಗುರುವಾರ ರಾತ್ರಿ ದೇವಸ್ಥಾನದಿಂದ ಹೊರಡುವ ಮೂರು ಮಠಗಳನ್ನು ದರ್ಶಿಸುವ ಗುರುವಿನ ದರ್ಶನಕ್ಕಾಗಿ ಜನರ ದಂಡೆ ಬಂದಿರುತ್ತದೆ.ಅನೇಕ ಜನರು ಮಧ್ಯರಾತ್ರಿ ನಡೆಯುವ ಮಹಾ ಮಂಗಳಾರತಿಯವರೆಗೂ ಮಠದಲ್ಲೇ ಇರುತ್ತಾರೆ. ಹಾಗಂತ ರಾತ್ರಿ ತಡವಾದರೂ ಸಹ ಬೆಳಗಿನ ಜಾವ ಅಭಿಷೇಕ ಎಂದಿನಂತೆಯೇ ನಡೆಯುತ್ತದೆ. ಸೋಮವಾರ ಕಾರ್ತಿಕವಿದ್ದರೆ ಅದರ ಹಿಂದಿನ ಗುರುವಾರ ಹೂವಿನ ಪಲ್ಲಕ್ಕಿ ಇರುತ್ತದೆ. ಇಡೀ ಪಲ್ಲಕ್ಕಿಯನ್ನು ಹೂವಿನಿಂದ ಅಲಂಕರಿಸಿರುವುದನ್ನು ನೋಡುವುದೇ ಒಂದು ಸೌಭಾಗ್ಯ.

"ತನುವ ಕೊಟ್ಟು ಗುರುವನೊಲಿಸ ಬೇಕು ಮನವ ಕೊಟ್ಟು ಲಿಂಗವನೊಲಿಸಬೇಕು
ಧನವ ಕೊಟ್ಟು ಜಂಗಮವನೊಲಿಸಬೇಕು ಈ ತ್ರಿ ವಿಧವ ಹೊರಹು
ಮಾಡಿ ಹರೆಯ ಹೋಯಿಸಿ ಕುರುಹ ಪೂಜಿಸುವವರ ಮೆಚ್ಚ
ಕೂಡಲಸಂಗಮದೇವ"

ಈ ವ್ರತದಲ್ಲಿ ಪ್ರಧಾನವಾಗಿ 108 ರುದ್ರಾಕ್ಷಿಗಳುಳ್ಳ ಮಾಲೆಯಲ್ಲಿ ಶ್ರೀ ಗುರು ಕೊಟ್ಟೂರೇಶ್ವರರ ಪದಕವಿರುತ್ತದೆ. ಈ ಮಾಲೆ ಧರಿಸಿದವರೆ ಶ್ರೀಗುರು ಮಾಲಾಧಾರಿಗಳು. ಕೊಟ್ಟೂರೇಶ್ವರ ಸ್ವಾಮಿ ಕಾರ್ತೀಕದ ಬಳಿಕ ಮಾಲೆ ತೆಗೆಯಲಾಗುತ್ತದೆ. ಹೀಗೆ ವ್ರತಾ ಆಚರಿಸುವವರು ಗುರುವಿನ ಸಾನಿಧ್ಯವನ್ನು ಅನುಭವಿಸುತ್ತಾರೆ. "ತೆನಾ ವಿನಃ ತೃಣಮತಿ ನಾಚಲತಿ" ( ನಿನ್ನ ಆಜ್ಞೆ ಇಲ್ಲದೆ ಹುಲ್ಲುಕಡ್ಡಿಯೂ ಅಲುಗಾಡುವುದಿಲ್ಲ) ಎಂಬ ಕವಿಯವಾಣಿಯಂತೆ ಪರಮಾತ್ಮನ ಅನುಗ್ರಹವಿಲ್ಲದೆ ಏನನ್ನು ಸಾಧಿಸಲಾಗದು.

ಪರಮಾತ್ಮನ ಕಾರಣಿಕ ಶಿಶುವಾಗಿ ಭೂಮಿಯಲ್ಲಿ ಅವತರಿಸಿದ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯು ಎಲ್ಲಾ ಮಾಲಾಧಾರಿಗಳ ಅಭೀಷ್ಟೆಗಳನ್ನು ಈಡೇರಿಸಿ ಸರ್ವರಿಗೂ ಸನ್ಮಂಗಲವನ್ನುಂಟು ಮಾಡಲಿ. ಸ್ವಾಮಿಯನ್ನು ಅನನ್ಯ ಶ್ರದ್ಧೆ, ಭಕ್ತಿಯಿಂದ ಪೂಜಿಸುವವರೆಲ್ಲರೂ ಗುರು ಕೃಪೆಗೆ ಪಾತ್ರರಾಗುವುದು ನಿಶ್ಚಿತ. ಕಳೆದ ಹಲವು ವರ್ಷಗಳಿಂದ ಶ್ರೀ ಗುರು ಮಾಲೆ ಧರಿಸಿದ ನಾಡಿನ ಸಾವಿರಾರು ಭಕ್ತರು ಸ್ವಾಮಿಯ ಕೃಪೆಯಿಂದ ತಮ್ಮ ಬದುಕಿನಲ್ಲಿ ಹಲವಾರು ಪ್ರಗತಿ ಕಂಡ ಸಾಕಷ್ಟು ಉದಾಹರಣೆಗಳಿವೆ.

